<u>58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ</u>
<u>ಸಿಸಿಹೆಚ್-59</u>
<u>ಎಸ್.ಸಿ.ನಂ. 1319/2024</u>

ಪಿ.ಡಬ್ಲ್ಯೂ. 19
ಸಿ.ಡಬ್ಲ್ಯೂ. 22
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 21.07.2026

| | |
|---|---|
| **ಸಾಕ್ಷಿಯ ಹೆಸರು** | ಸುಬ್ರಹ್ಮಣ್ಯ. ಎಸ್ |
| **ತಂದೆಯ ಹೆಸರು** | ಲೇಃ ಸಿದ್ದರಾಜು. ಎಸ್ |
| **ವಯಸ್ಸು** | 32 ವರ್ಷ |
| **ವೃತ್ತಿ** | ಎಫ್.ಡಿ.ಸಿ, BBMP, Joint Commissioner Office. |
| **ವಾಸ ಸ್ಥಳ** | ಕ.ವಿ.ಕಾ.ಲೇಔಟ್, ಬೆಂಗಳೂರು. |

**<u>ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ</u>**

ನಾನು ಕಳೆದ ಐದು ವರ್ಷಗಳಿಂದ BBMP, Joint Commissioner Office ನಲ್ಲಿ ಎಫ್.ಡಿ.ಸಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ14.06.2024 ರಂದು ನಾನು ಕಛೇರಿಯಲ್ಲಿ ಕರ್ತವ್ಯದಲ್ಲಿ ಇದ್ದಾಗ, ವಿಜಯನಗರ ಸಹಾಯಕ ಪೊಲೀಸ್ ಆಯುಕ್ತರ ಕಛೇರಿಯಿಂದ ನಮ್ಮ ಮೇಲಾಧಿಕಾರಿಗಳಿಗೆ ಒಂದು ಪತ್ರ ಬಂದಿತ್ತು. ಸದರಿ ಪತ್ರದಲ್ಲಿ ಪಂಚನಾಮೆ ಇಬ್ಬರು ಸಿಬ್ಬಂದಿಗಳನ್ನು ಕಳುಹಿಸಿಕೊಡಲು ಕೋರಲಾಗಿತ್ತು.

3. ಸದರಿ ಕೋರಿಕೆಯಂತೆ ನಮ್ಮ ಮೇಲಾಧಿಕಾರಿಯಾದ ಜಂಟಿ ಆಯುಕ್ತರು ನನ್ನನ್ನು ಮತ್ತು ನನ್ನ ಸಹೋದ್ಯೋಗಿಯಾದ

ವೇಣುಗೋಪಾಲ(ಚಾ.ಸಾ.21)ರವರನ್ನು ಸದರಿ ಮಹಜರ್ ಗೆ ಪಂಚರಾಗಿ ಸಹಕರಿಸಬೇಕು ಎಂದು ತಿಳಿಸಿದ್ದರು. ಅದರಂತೆ ನಾನು ಮತ್ತು ಚಾ.ಸಾ.21 ರವರು ನಮ್ಮ ಕಛೇರಿಗೆ ಬಂದ ಒಬ್ಬ ಪೊಲೀಸ್ ಸಿಬ್ಬಂದಿಯೊಂದಿಗೆ ಹೋಗಿರುತ್ತೇವೆ. ನಾವು ಆ ದಿನ ಆ ಪೊಲೀಸ್ ಸಿಬ್ಬಂದಿಯೊಂದಿಗೆ ಅನ್ನಪೂರ್ಣೇಶ್ವರಿ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ಅಲ್ಲಿ ಪಿಐ ನಾಗೇಶ್ ರವರನ್ನು ಬೇಟಿಯಾಗಿರುತ್ತೇವೆ.

4. ಆಗ ಸದರಿ ಪಿಐರವರು ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂದಿಸಿದಂತೆ ವಿವರಣೆ ನೀಡಿ, ಆ ಪ್ರಕರಣದಲ್ಲಿ ಇರುವ ಆರೋಪಿ ಕಾರ್ತಿಕ್ ಅವರ ವಶದಲ್ಲಿ ಇದ್ದಾರೆ ಎಂದು ತೋರಿಸಿ, ಇವರು ಕೊಲೆ ಮಾಡಿದ ದಿನ ಧರಿಸಿದ್ದ ಬಟ್ಟೆಗಳನ್ನು ಆರ್.ಆರ್.ನಗರದ ಹೋಟೆಲ್ ಒಂದರಲ್ಲಿ ಬಿಚ್ಚಿಟ್ಟಿದ್ದು, ಅಲ್ಲಿಗೆ ಕರೆದುಕೊಂಡು ಹೋದರೆ ತೋರಿಸುವುದಾಗಿ ತಿಳಿಸಿದ್ದು, ಅಲ್ಲಿಗೆ ಹೋಗಿ ಮಹಜರ್ ಮಾಡಬೇಕಾಗಿರುವುದರಿಂದ, ನೀವು ಸದರಿ ಮಹಜರ್ ಗೆ ಸಹಕರಿಸಬೇಕು ಎಂದು ನಮಗೆ ತಿಳಿಸಿದ್ದರು.

5. ನಂತರ ಅದೇ ದಿನ ಸಂಜೆ 4.00-4.30 ಗಂಟೆ ಸಮಯಕ್ಕೆ ಪೊಲೀಸ್ ವಾಹನದಲ್ಲಿ ನಾನು, ಚಾ.ಸಾ.21-ವೇಣುಗೋಪಾಲ್, ಪಿಐ ನಾಗೇಶ್ ರವರು ಆರೋಪಿ ಕಾರ್ತಿಕ್‌ನೊಂದಿಗೆ ಪೊಲೀಸ್ ಠಾಣೆಯಿಂದ

ಹೊರಟಿರುತ್ತೇವೆ. ಅಲ್ಲಿಂದ ನಾವು ಅಂಬೇಡ್ಕರ್ ಕಾಲೇಜ್ ಮೂಲಕ ಆರ್.ಆರ್.ನಗರದ ಗೇಟ್ ಒಳಗಡೆ ಹೋಗಿರುತ್ತೇವೆ. ಅಲ್ಲಿಂದ ಸ್ವಲ್ಪ ಮುಂದೆ ಹೋದಾಗ ಎಡಭಾಗದಲ್ಲಿ ಒಂದು ಹೋಟೆಲ್ ಕಂಡಿತ್ತು. ಸದರಿ ಹೋಟೆಲ್ Hotel Tribo 98 Street ಎಂದು ಆಗಿತ್ತು. ಸದರಿ ಹೋಟೆಲ್ ನ್ನು ಕಾರ್ತಿಕ್ ತೋರಿಸಿರುತ್ತಾನೆ.

6. ನಂತರ ನಾವೆಲ್ಲರೂ ವಾಹನದಿಂದ ಕೆಳಗೆ ಇಳಿದು, ಹೋಟೆಲ್‌ನ ಮೊದಲನೆ ಮಹಡಿಗೆ ಹೋಗಿರುತ್ತೇವೆ. ಅಲ್ಲಿ ಸದರಿ ಹೋಟೆಲ್ ರಿಸ್ಪೆಷನ್ ಕೌಂಟರ್ ನಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದು, ಅವರನ್ನು ಪಿಐ ನಾಗೇಶ್‌ರವರು ಪರಿಚಯ ಮಾಡಿಕೊಂಡು ವಿಚಾರಿಸಿದಾಗ, ಆ ವ್ಯಕ್ತಿ ಆ ಹೋಟೆಲ್‌ನ ಮಾಲೀಕ ಎಂದು ತಿಳಿಸಿರುತ್ತಾರೆ. ಅಲ್ಲಿಂದ 2 ನೇ ಮಹಡಿಗೆ ಹೋಗಿರುತ್ತೇವೆ. ಅಲ್ಲಿ ಆರೋಪಿ ಕಾರ್ತಿಕ್, ಆತ ಉಳಿದುಕೊಂಡಿದ್ದ ರೂಂ.ನಂ.203 ಕ್ಕೆ ಕರೆದುಕೊಂಡು ಹೋಗಿರುತ್ತಾನೆ. ಆ ರೂಂನ ಒಳಗಡೆ ಹೋಗಿ ನೋಡಿದಾಗ, ಅಲ್ಲಿ ಯಾವುದೇ ಬಟ್ಟೆಗಳು ಕಂಡುಬಂದಿರುವುದಿಲ್ಲ. ಸದರಿ ಬಟ್ಟೆಗಳ ಕುರಿತು ಪಿಐ ನಾಗೇಶ್‌ರವರು ಸದರಿ ಹೋಟೆಲ್‌ನ ಕ್ಲೀನರ್ ನ್ನು ವಿಚಾರಿಸಿದಾಗ, ಆ ಕ್ಲೀನರ್ ಯಾವುದೇ ಗ್ರಾಹಕರು ಯಾವುದೇ ವಸ್ತುಗಳನ್ನು ಬಿಟ್ಟು ಹೋಗಿದ್ದರೆ, ಎರಡು ದಿನಗಳವರೆಗೆ ಮಾತ್ರ ಆ ವಸ್ತುಗಳನ್ನು ಇಟ್ಟುಕೊಳ್ಳುತ್ತೇವೆ, ಎರಡು ದಿನಗಳ ನಂತರ ಅವುಗಳನ್ನು ಕಸದ ಬುಟ್ಟಿಗೆ ಹಾಕುತ್ತೇವೆ ಮತ್ತು ಸದರಿ ಕಸವನ್ನು

ಬಿಬಿಎಂಪಿಯವರು ತೆಗೆದುಕೊಂಡು ಹೋಗುತ್ತಾರೆ ಎಂದು ತಿಳಿಸಿರುತ್ತಾರೆ.

7. ನಂತರ ನಾವು ಹೋಟೆಲ್‌ನ ಮೊದಲನೆ ಮಹಡಿಗೆ ಬಂದಿರುತ್ತೇವೆ. ಅಲ್ಲಿ ಪಿಐ ನಾಗೇಶ್‌ರವರು, ಸದರಿ ಹೋಟೇಲ್‌ನ ಲೆಡ್ಜರ್ ನ್ನು ಪರಿಶೀಲನೆ ಮಾಡಿರುತ್ತಾರೆ. ಸದರಿ ರಿಜಿಸ್ಟರ್ ನ ದಿಃ09.06.2024 ರ ಪುಟದಲ್ಲಿ ಕಾರ್ತಿಕ್, ನಿಖಿಲ್ ಮತ್ತು ಕೇಶವ ಮೂರ್ತಿ ಎಂಬುವವರು ಹೆಸರು ಇರುವುದು ಕಂಡುಬರುತ್ತದೆ. ಸದರಿ ರಿಜಿಸ್ಟರ್ ನಲ್ಲಿ ಕಾರ್ತಿಕ್‌ರವರ ಆಧಾರ್ ಕಾರ್ಡ ನ ನಕಲು ಪ್ರತಿ ಕೂಡ ಇರುವುದು ಕಂಡುಬಂದಿತ್ತು. ನಂತರ ಪಿಐರವರು ಸದರಿ ರಿಜಿಸ್ಟರ್ ಮತ್ತು ಆಧಾರ್ ಕಾರ್ಡನ ನಕಲು ಪ್ರತಿಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಎರಡು ನಕಲು ಪ್ರತಿಗಳಿಗೆ ನನ್ನ ಮತ್ತು ಚಾ.ಸಾ.21 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ.

8. ಸದರಿ ಸ್ಥಳದಲ್ಲಿ ಮಹಜರ್ ಮಾಡುವ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ ಹಾಗೂ ಅಲ್ಲಿಯೇ ಮಹಜರ್ ನ ಪ್ರಿಂಟ್ ತೆಗೆದು ನನ್ನ ಮತ್ತು ಚಾ.ಸಾ.21 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಮಹಜರ್ನ್ನು ಹಾಗೂ ರಿಜಿಸ್ಟರ್ ಮತ್ತು ಆಧಾರ್ ಕಾರ್ಡನ ಪ್ರತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿಃ14.06.2024 ರಂದು ಮಾಡಿದ ಮಹಜರ್ ನ್ನು ತೋರಿಸಿದಾಗ, ಸದರಿ ಮಹಜರ್ ನ್ನು ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ

ಮಹಜರ್ ನ್ನು **ನಿ.ಪಿ.117** ಮತ್ತು ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.117(ಎ)** ಎಂದು ಗುರುತಿಸಲಾಯಿತು. ಸದರಿ ಮಹಜರ್ ನೊಂದಿಗೆ ಇದ್ದ ರಿಜಿಸ್ಟರ್ ನ ಮತ್ತು ಕಾರ್ತಿಕ್ ನ ಆಧಾರ್ ಕಾರ್ಡ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

9. At this stage Ld. Designated Sr. Counsel for A2 objected for marking these documents on the ground that these two documents are copies are xerox copies and whatever documents seized are xerox copies, inspite of availability of the original Register.

10. Ld. Spl. PP submitted that, the copy of Aadhar Card whatever received by the customer by the hotel is taken print out and the witness has identified his signatures on the copies of the Aadhar Card and the Register. Hence, prayed for marking the documents.

11. Ld. Designated Sr. Counsel for A2 further

submits that the said documents are xerox copies and the law does not permits for marking the xerox copies.

12. Heard and perused. Though the signatures of the panchas appears to be original, but prosecution has produced the xerox copies of the Register & Aadhar Card. Hence the xerox copies of the Register & Aadhar cannot be admitted in the evidence in the absence of production of original documents. Hence, prayer of Ld. Spl. PP for marking of xerox copies of the Register and the Aadhar Card is rejected.

13. ಆ ದಿನ ನಾವು ನೋಡಿದ ವ್ಯಕ್ತಿ ಕಾರ್ತಿಕ್‌ರವರನ್ನು ಈಗ ಮತ್ತೊಮ್ಮೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ದಿನ ನ್ಯಾಯಾಲಯದಲ್ಲಿ ಹಾಜರು ಇದ್ದ ನಾಲ್ಕು ಜನ ಆರೋಪಿಗಳನ್ನು ನೋಡಿ, ಅವರಲ್ಲಿ ಕಾರ್ತಿಕ್ ಎಂಬ ವ್ಯಕ್ತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಅದರಂತೆ ಸಾಕ್ಷಿಗೆ ಈಗ ನ್ಯಾಯಾಲಯದಲ್ಲಿ ವಿಸಿ ಮೂಲಕ ಹಾಜರು ಇದ್ದ, 7 ಜನ ಆರೋಪಿಗಳನ್ನು ತೋರಿಸಿದಾಗ, ಅವರಲ್ಲೂ ಕೂಡ ಆರೋಪಿ ಕಾರ್ತಿಕ್ ಇರುವುದಿಲ್ಲ ಎಂದು

ನುಡಿದಿರುತ್ತಾರೆ. ಈ ದಿನ ಆರೋಪಿ ಕಾರ್ತಿಕ್ ಗೈರುಹಾಜರು ಇದ್ದು, ಅವರ ಪರ ವಕೀಲರು ಹಾಜರು ಇದ್ದು, ಅವರನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

14. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿದಾಗ, ಅದನ್ನು ಅವರು ನೋಡಿ ಗುರುತಿಸಿದ್ದು, ಇದೇ ಫೋಟೋವನ್ನು ಮಹಜರ್ ಸಮಯದಲ್ಲಿ ತೆಗೆದಿರುವುದಾಗಿ ಹಾಗೂ ಅದರಲ್ಲಿ ಇರುವ ವ್ಯಕ್ತಿಗಳನ್ನು ಸಹ ಗುರುತಿಸಲು ಆಗುತ್ತದೆ ಎಂದು ನುಡಿದಿರುತ್ತಾರೆ.

15. At this stage, Ld. Counsels for A1 to 17 objected for marking of document on the ground that non availability of certificate U/Sec. 65B of Evidence Act and soft copy or memory card.

16. Ld. Spl. PP submitted that concerned police, who has taken the photo and print out has the certificate and it will be produced in due course.

17. At this stage, Ld. Spl. PP submits, IO has seized the Register Book from the Hotel and it is in

PF.No.134/2024(PR.No.1755/25).

18. Sealed cover of PR.No.1755/2025 is opened in the open court in the presence of Ld. Spl. PP and Ld. Defence counsels. The sealed cover, on opening contains one Register bearing the name as "Hotel 98 Street Guest Register". The witness has identified the said Register and stated that, this is the register he has seen at the time of Mahazar and also identified the entry dtd., 09.06.2024 in the Register. The said Register is marked as **Ex.P118** and specific entry in the register, dtd. 09.06.2024 is marked as **Ex.P118(a)**.

19. ನಾವು ಆ ದಿನ ಮಹಜರ್ ಗೆ 4.30 ಗಂಟೆಗೆ ಠಾಣೆಯಿಂದ ಹೊರಟಿದ್ದು, ಮಹಜರ್ ಮುಗಿದಾಗ ಸಮಯ ಸಂಜೆ 6.00 ಗಂಟೆಯಾಗಿತ್ತು. ಮಹಜರ್ ಮುಗಿದ ನಂತರ ನಾವು ವಾಪಸ್ಸು ಠಾಣೆಗೆ ಹೋಗಿರುತ್ತೇವೆ. ಅಲ್ಲಿ ಪಿಐ ನಾಗೇಶ್‌ರವರು ಇದೇ ಪರಕರಣಕ್ಕೆ ಸಂಬಂದಿಸಿದ ಇನ್ನೊಬ್ಬ ಆರೋಪಿ ನಿಖಿಲ್, ಕೃತ್ಯ ನಡೆದ ದಿನ ಧರಿಸಿದ ಬಟ್ಟೆಗಳನ್ನು, ಈ ದಿನವೂ ಕೂಡ ಧರಿಸಿದ್ದು,

ಆ ಬಟ್ಟೆಗಳನ್ನು ಅಮಾನತ್ತುಪಡಿಸಿಕೊಳ್ಳಬೇಕಾಗಿದೆ ಎಂದು ಹಾಗೂ ಸದರಿ ಪಂಚನಾಮೆಗೆ ಪಂಚರಾಗಿ ಸಹಕರಿಸಬೇಕು ಎಂದು ಕೋರಿಕೊಂಡಿದ್ದರು.

20. ನಂತರ ಪಿಐ ನಾಗೇಶ್‌ರವರು ಸದರಿ ಆರೋಪಿ ನಿಖಿಲ್‌ರವರನ್ನು ಕರೆಸಿರುತ್ತಾರೆ. ಸದರಿ ಆರೋಪಿ ನಿಖಿಲ್ ಠಾಣೆಗೆ ಬಂದ ನಂತರ ಪಿಐ ನಾಗೇಶ್ ರವರು ವಿಚಾರಣೆ ಮಾಡಿದಾಗ ಆತ ಇದೇ ಬಟ್ಟೆಯನ್ನು ಕೃತ್ಯ ನಡೆದ ದಿನ ಧರಿಸಿದ್ದು, ಬೇರೆ ಬಟ್ಟೆ ನೀಡಿದರೆ ಈ ಬಟ್ಟೆಗಳನ್ನು ನೀಡುವುದಾಗಿ ತಿಳಿಸಿದನು.

21. At this stage, Ld. Designated Sr. counsel for A2 objected for recording the statement of witness on the ground that it will become the confession part and it cannot be recorded.

22. Ld. SPP submitted that the witness has not spoken to the involvement of the accused in the offence and he has spoken only about the wearing of the clothes on the day of incident and production of said clothes by the accused.

23. Heard. The witness is deposing, whatever

seen and heard by him on the day of mahazar. It is not the part of the confessional statement and it is only the information leading to recovery. Hence, witness is allowed to say whatever he has seen and heard on the day of mahazar.

24. ನಂತರ ಪಿಐ ನಾಗೇಶ್ ರವರು ಒಂದು ಜೊತೆ ಬಟ್ಟೆಯನ್ನು ತರಿಸಿ ಆರೋಪಿ ನಿಖಿಲ್ ಗೆ ಕೊಟ್ಟಿರುತ್ತಾರೆ. ಆನಂತರ ಬೇರೆ ಬಟ್ಟೆಗಳನ್ನು ಧರಿಸಿ, ಆರೋಪಿ ನಿಖಿಲ್ ತಾವು ಧರಿಸಿದ ಬಟ್ಟೆಗಳನ್ನು ತೆಗೆದುಕೊಟ್ಟಿರುತ್ತಾರೆ. ಆ ದಿನ ಆರೋಪಿ ನಿಖಿಲ್ ಕಪ್ಪು ಬಣ್ಣದ ಪ್ಯಾಂಟು ಮತ್ತು ನೀಲಿ ಬಣ್ಣದ ತುಂಬುತೋಳಿನ ಟೀ ಶರ್ಟನ್ನು ತೆಗೆದುಕೊಟ್ಟಿರುತ್ತಾರೆ. ನಂತರ ಅವುಗಳನ್ನು ಒಂದು ಬಿಳಿ ಬಣ್ಣದ ಬಟ್ಟೆಯಲ್ಲಿ ಹಾಕಿ ಕಟ್ಟಿ ಸೀಲು ಮಾಡಿ ಚೀಟಿಗಳನ್ನು ತಯಾರಿಸಿ ನಮ್ಮ ಸಹಿಗಳನ್ನು ಪಡೆದು ಸದರಿ ಬಿಳಿ ಬಟ್ಟೆಗಳಿಗೆ ಅಂಟಿಸಿರುತ್ತಾರೆ. ಮಹಜರ್ ಸಮಯದಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ ಹಾಗೂ ಮಹಜರ್ ಮುಗಿದ ನಂತರ, ಅಲ್ಲಿಯೇ ಪ್ರಿಂಟ್ ತೆಗೆದು ನಮ್ಮ ಸಹಿಗಳನ್ನು ಪಡೆದಿರುತ್ತಾರೆ.

25. ಸದರಿ ಮಹಜರ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ದಿಃ14.06.2024 ರಂದು ಮಾಡಿದ ಮತ್ತೊಂದು ಮಹಜರ್ ನ್ನು

ತೋರಿಸಿದಾಗ, ಸದರಿ ಮಹಜರ್ ನ್ನು ಹಾಗೂ ಅದರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು **ನಿ.ಪಿ.119** ಮತ್ತು ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.119(ಎ)** ಎಂದು ಗುರುತಿಸಲಾಯಿತು.

26. Sealed two cloth bags under PF.No. 114/24 (PR.No.1755/2025) is opened in the open court in the presence of Ld. Spl. PP and Ld. Defence counsels. On opening the two cloth bags, one bag contains one black colour pant and another bag contains one blue colour full sleeve T-shirt. The witness has identified the said clothes. The pant is marked as **M.O.51** & the T-Shirt is marked as **M.O.52**. The witness has identified his signature on the chits attached to the said cloth bags. The signatures of the witness is marked as **M.O.51(a)** & **M.O.52(a).**

27. ಆ ದಿನ ಬಟ್ಟೆಗಳನ್ನು ಹಾಜರುಪಡಿಸಿದ ಆರೋಪಿ ನಿಖಿಲ್

ರವರನ್ನು ಈಗ ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರು ಇದ್ದ ನಾಲ್ಕು ಜನ ಆರೋಪಿಗಳನ್ನು ಸಾಕ್ಷಿ ನೋಡಿ, ಅವರಲ್ಲಿ ಕಪ್ಪು ಬಣ್ಣದ ಟೀ ಶರ್ಟ ಧರಿಸಿದ್ದ ಒಬ್ಬ ವ್ಯಕ್ತಿಯನ್ನು ಗುರುತಿಸಿ, ಇದೇ ಆ ವ್ಯಕ್ತಿ ನಿಖಿಲ್ ಎಂದು ಗುರುತಿಸಿರುತ್ತಾರೆ. ಸದರಿ ವ್ಯಕ್ತಿ ಈ ಪ್ರಕರಣದ 17 ನೇ ಆರೋಪಿ ನಿಖಿಲ್ ನಾಯ್ಕು ಆಗಿರುತ್ತಾರೆ.

28. ಸಾಕ್ಷಿಗೆ ಈಗ ಒಂದು ಫೊಟೋವನ್ನು ತೋರಿಸಿದಾಗ, ಅದನ್ನು ಅವರು ನೋಡಿ ಗುರುತಿಸಿದ್ದು, ಇದೇ ಫೊಟೋವನ್ನು ಎರಡನೇ ಮಹಜರ್ ಸಮಯದಲ್ಲಿ ತೆಗೆದಿರುವುದಾಗಿ ಹಾಗೂ ಅದರಲ್ಲಿ ಇರುವ ವ್ಯಕ್ತಿಗಳನ್ನು ಸಹ ಗುರುತಿಸಲು ಆಗುತ್ತದೆ ಎಂದು ನುಡಿದಿರುತ್ತಾರೆ.

29. At this stage, Ld. Counsels for A1 to 17 objected for marking of document on the ground of non availability of soft copy or memory card.

30. Ld. Spl. PP submitted that concerned police, who has taken the photo and print out has the soft copies and it will be produced in due course. Ld. SPP submits that the certificate U/Sec. 65B of Evidence Act

is produced which is available in Pg.515 relating to the above mentioned photo.

31. As the certificate U/Sec. 65B of Evidence Act is available on record relating to the photo, the said photo is marked as **Ex.P120**. ಸಾಕ್ಷಿ ಸದರಿ ಫೋಟೋದಲ್ಲಿ ಇರುವ ವ್ಯಕ್ತಿಗಳನ್ನು ನೋಡಿ ಎಡದಿಂದ ಬಲಕ್ಕೆ ನನ್ನ ಸಹೋದ್ಯೋಗಿ ವೇಣುಗೋಪಾಲ್, ಅವರ ಪಕ್ಕದಲ್ಲಿ ನಾನು, ನನ್ನ ಪಕ್ಕದಲ್ಲಿ ನಿಖಿಲ್, ನಂತರ ಪೊಲೀಸ್ ಸಿಬ್ಬಂದಿ, ಅವರ ಪಕ್ಕ ಪಿಐ ನಾಗೇಶ್ ಮತ್ತು ಇನ್ನೊಬ್ಬ ಪೊಲೀಸ್ ಸಿಬ್ಬಂದಿ ಬೆರಳಚ್ಚು ಮಾಡುತ್ತಿರುವುದಾಗಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ, ನ್ಯಾಯಾಲಯದ ಸಮಯ 5.00 ಗಂಟೆಗೆ ಯಾದ ಕಾರಣದಿಂದ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,
ಬೆಂಗಳೂರು.**

**ದಿನಾಂಕಃ22.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ್ ಪ್ರಾಜ್ಞ ಪಿಪಿ ರವರಿಂದಃ**

32. ಅದೇ ದಿನ ರಾತ್ರಿ 10.45 ಗಂಟೆ ಸಮಯಕ್ಕೆ ಎಸಿಪಿ ಚಂದನ್ ರವರು ಪ್ರಕರಣದ ಬಗ್ಗೆ ವಿವರಣೆ ಮಾಡಿ, ಈ ಪ್ರಕರಣದ ಆರೋಪಿಯಾದ ದರ್ಶನ್‌ರವರು ಕೃತ್ಯದ ದಿನ ಧರಿಸಿದ ಬಟ್ಟೆ ಮತ್ತು ಪಾದರಕ್ಷೆಗಳನ್ನು ಜಪ್ತಿ ಮಾಡಬೇಕು ಪಂಚರಾಗಿ ಸಹಕರಿಸಬೇಕು ಎಂದು ತಿಳಿಸಿ, ನನ್ನನ್ನು ಮತ್ತು ಚಾ.ಸಾ.21 ರವರನ್ನು ಆರ್.ಆರ್.ನಗರದಲ್ಲಿ ಇರುವ 2 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋದರು. ನಮ್ಮ ಜೊತೆ ವಿಧಿವಿಜ್ಞಾನ ಅಧಿಕಾರಿಗಳು ಸಹ ಹಾಜರು ಇದ್ದರು. ಆ ದಿನ 2 ನೇ ಆರೋಪಿ ದರ್ಶನ್ ಮತ್ತು 3 ನೇ ಆರೋಪಿ ಪವನ್ ರವರು ತನಿಖಾಧಿಕಾರಿಯವರ ಜೊತೆ ಕರೆದುಕೊಂಡು ಹೋದರು.

33. ಮನೆಗೆ ಹೋದಾಗ ಸಮಯ ಸುಮಾರು ರಾತ್ರಿ 11.15 ಗಂಟೆಯಾಗಿದ್ದು, ಮನೆ ಒಳಗೆ ಪ್ರವೇಶಿಸಿ ಹಾಲ್‌ನಲ್ಲಿ ಇದ್ದ ಮೆಟ್ಟಲಿನ ಮೂಲಕ 1 ನೇ ಮಹಡಿಗೆ ಕರೆದುಕೊಂಡು ಹೋದರು. ಅಲ್ಲಿ ಇರುವ ಪ್ಲಾಸ್ಟಿಕ್ ಬ್ಯಾಸ್ಕೆಟ್ ತೆಗೆದು ನೋಡಲಾಗಿ, ಅದರಲ್ಲಿ ಸದರಿ ಬಟ್ಟೆಗಳು ಇರಲಿಲ್ಲ. ನಂತರ ಟೆರೆಸ್‌ನಲ್ಲಿ ಇರಬಹುದು ಎಂದು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದರು. ಅಲ್ಲಿ ಬಟ್ಟೆಗಳನ್ನು ಒಗೆದು ಒಣಗಲು ಹಾಕಿದ್ದು, ಸದರಿ ಬಟ್ಟೆಗಳನ್ನು 2 ನೇ ಆರೋಪಿ ಗುರುತಿಸಿದ್ದು, ಅವುಗಳನ್ನು ವಿಧಿವಿಜ್ಞಾನ ತಂಡವು ಸಂರಕ್ಷಿಸಿ ಸೀಲ್

ಮಾಡಿದರು. ಆ ಸಮಯದಲ್ಲಿ ಬಟ್ಟೆಗಳ ಭಾವಚಿತ್ರಗಳನ್ನು ಸಹ ತೆಗೆಯಲಾಗಿತ್ತು.

34. ಸಾಕ್ಷಿಗೆ ಈಗ ಭಾವಚಿತ್ರಗಳನ್ನು ತೋರಿಸಿದಾಗ, ಸಾಕ್ಷಿ ಅವುಗಳನ್ನು ನೋಡಿ ಯಾವ ಯಾವ ಸಮಯದಲ್ಲಿ ತೆಗೆದಿದೆ ಎಂದು ಗುರುತಿಸಿರುತ್ತಾರೆ. ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋಗಳಿಗೆ ಸಂಬಂದಿಸಿದಂತೆ ಪ್ರಮಾಣ ಪತ್ರ ಇರದ ಕಾರಣ ಗುರುತಿಸಲು ಆಗುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

35. ಮಾನ್ಯ ಪಿಪಿರವರು ಸದರಿ ಪ್ರಮಾಣ ಪತ್ರ ಇನ್ನೊಂದು ಕಡತದಲ್ಲಿ ಇದ್ದ ಬಗ್ಗೆ ತಿಳಿಸಿದ್ದರಿಂದ, ಆಕ್ಷೇಪಣೆಗೆ ಒಳಪಟ್ಟು, ಸದರಿ ನಾಲ್ಕು ಫೋಟೋಗಳನ್ನು **ನಿ.ಪಿ.121 ರಿಂದ 124**. ನಿ.ಪಿ.121 ಫೋಟೋ ಹಾಲ್‌ನಲ್ಲಿ ತೆಗೆದಿರುತ್ತಾರೆ. ನಿ.ಪಿ.122 ಫೋಟೋ ಟೆರೇಸ್‌ನಲ್ಲಿ ತೆಗೆದಿರುತ್ತಾರೆ. ನಿ.ಪಿ.123 ಮತ್ತು 124 ಜಪ್ತಿ ಮಾಡಿದ ಬಟ್ಟೆಗಳಿಗೆ ಸಂಬಂದಿಸಿದ ಫೋಟೋಗಳಾಗಿರುತ್ತವೆ ಎಂದು ನುಡಿಯುತ್ತಾರೆ.

36. ಸಾಕ್ಷಿ ಈಗ ಬಟ್ಟೆಗಳು ಇರುವ ಲಕೋಟೆಯ ಮೇಲೆ ಇರುವ ಅವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಸೀಲ್ ಆಗಿರುವ PF.No.115/24 ನ ಎರಡು ಲಕೋಟೆಯನ್ನು ತೆರದ ನ್ಯಾಯಾಲಯದಲ್ಲಿ ಮಾನ್ಯ ಪಿಪಿ ಮತ್ತು ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆದು ನೋಡಲಾಗಿ, ಅದರಲ್ಲಿ ಒಂದು ನೀಲಿ ಬಣ್ಣದ ಜೀನ್ಸ ಪ್ಯಾಂಟು ಮತ್ತು Opium

value company T-shirt ಇದ್ದು, ಅವುಗಳನ್ನು ಸಾಕ್ಷಿಗೆ ತೋರಿಸಿದಾಗ, ಅವರು ನೋಡಿ ಗುರುತಿಸಿರುತ್ತಾರೆ. ಸದರಿ ನೀಲಿ ಬಣ್ಣದ ಜೀನ್ಸ ಪ್ಯಾಂಟ್‌ನ್ನು **ಮು.ಮಾ.53** ಮತ್ತು ಟೀ ಶರ್ಟ್‌ನ್ನು **ಮು.ಮಾ.54** ಎಂದು ಗುರುತಿಸಲಾಯಿತು.

37. ನಂತರ ಮನೆಯ ಕೆಳಗೆ ಬಂದು, ಪಾದರಕ್ಷೆಗಳು ಇಡುವ ಸ್ಥಳದಲ್ಲಿ ಮತ್ತು ಡ್ರೆಸಿಂಗ್ ರೂಂನಲ್ಲಿ ಪರಿಶೀಲಿಸಲಾಗಿ, 2 ನೇ ಆರೋಪಿಯ ಪಾದರಕ್ಷೆಗಳು ಇರುವುದಿಲ್ಲ, ಆಗ 3 ನೇ ಆರೋಪಿ ಮೈಸೂರಿಗೆ ಚಿತ್ರೀಕರಣ ನಿಮಿತ್ತ ತೆಗೆದುಕೊಂಡ ಹೋದ ಬಗ್ಗೆ ತಿಳಿಸಿರುತ್ತಾರೆ. ನಂತರ ಎಸಿಪಿ ಚಂದನ್ ರವರು ಸೆಕ್ಯುರಿಟಿಯವರಿಂದ ರಾಜು ಎಂಬುವವರ ಮೊಬೈಲ್ ಸಂಖ್ಯೆ ಪಡೆದಿರುತ್ತಾರೆ.

38. ನಂತರ ತನಿಖಾಧಿಕಾರಿಯವರು 2 ನೇ ಆರೋಪಿಯ ಮನೆಯಲ್ಲಿ, ಚಾಲ್ತಿಯಲ್ಲಿ ಇಲ್ಲದೇ ಇದ್ದ ಡಿವಿಆರ್ ಸೆಟ್‌ನ್ನು ತನಿಖೆಗಾಗಿ ಪಡೆದುಕೊಂಡರು. ಸದರಿ ಡಿವಿಆರ್ ಸೆಟ್‌ನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ, ನಮ್ಮ ಸಹಿ ಪಡೆದುಕೊಂಡು ಜಪ್ತಿ ಮಾಡಿಕೊಂಡರು. ಸದರಿ ಸೀಲ್ ಮಾಡಿದ ಬಿಳಿ ಬಟ್ಟೆಯ ಮೇಲೆ ಇರುವ ಅವರ ಸಹಿಯನ್ನು ಸಾಕ್ಷಿ ಈಗ ನೋಡಿ ಗುರುತಿಸಿರುತ್ತಾರೆ.

39. ಈ ಹಂತದಲ್ಲಿ ಸೀಲ್ ಆಗಿರುವ PF.No.115/24 ನ

ಒಂದು ಸೀಲ್ ಆದ ಲಕೋಟೆಯನ್ನು ತೆರದ ನ್ಯಾಯಾಲಯದಲ್ಲಿ ಮಾನ್ಯ ಪಿಪಿ ಮತ್ತು ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆದು ನೋಡಲಾಗಿ ಅದರಲ್ಲಿ ಒಂದು ಡಿವಿಆರ್ ಸೆಟ್ ಇದ್ದು, ಅದನ್ನು ಸಾಕ್ಷಿಗೆ ತೋರಿಸಿದಾಗ, ಅವರು ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಡಿವಿಆರ್ ಸೆಟ್‌ನ್ನು **ಮು.ಮಾ.55** ಮತ್ತು ಸೀಲ್ ಕವರ್ ಮೇಲೆ ಇರುವ ಈ ಸಾಕ್ಷಿಯ ಸಹಿಯನ್ನು **ಮು.ಮಾ.55(ಎ)** ಮತ್ತು  ಎಂದು ಗುರುತಿಸಲಾಯಿತು.

40. ಸುಮಾರು ರಾತ್ರಿ 12.50 ಗಂಟೆ ಸಮಯದಲ್ಲಿ 2 ನೇ ಆರೋಪಿಯ ಮನೆಯಿಂದ ಅತ್ತಿಗುಪ್ಪೆಯಲ್ಲಿ ಇರುವ ರಾಜುರವರ ಮನೆಗೆ ತನಿಖಾಧಿಕಾರಿಯವರು ಕರೆದುಕೊಂಡು ಹೋದರು. ಅಲ್ಲಿ ಅತ್ತಿಗುಪ್ಪೆಗೆ ಹೋಗಿ ರಾಜುರವರ ಮನೆ ಗೊತ್ತಿರದ ಕಾರಣ, ರಾಜುರವರಿಗೆ ತನಿಖಾಧಿಕಾರಿಯವರು ದೂರವಾಣಿ ಮೂಲಕ ಸಂಪರ್ಕಿಸಿ ವಿಚಾರಿಸಿದಾಗ, 2 ನೇ ಆರೋಪಿಗೆ ಸಂಬಂದಿಸಿದ ಎಲ್ಲಾ ವಸ್ತುಗಳನ್ನು 2 ನೇ ಆರೋಪಿಯ ಹೆಂಡತಿ ವಿಜಯಲಕ್ಷ್ಮೀರವರಿಗೆ ನೀಡುವುದಾಗಿ ತಿಳಿಸಿರುತ್ತಾರೆ.

41. ನಂತರ ತನಿಖಾಧಿಕಾಕರಿಯವರು 2 ನೇ ಆರೋಪಿಯ ಕಡೆಯಿಂದ ವಿಜಯಲಕ್ಷ್ಮೀರವರ ಮೊಬೈಲ್ ನಂಬರ್ ಪಡೆದು ಅವರಿಗೆ ಕರೆ ಮಾಡಿ ದರ್ಶನ್‌ರವರ ಶೂಗಳನ್ನು ಜಪ್ತಿ ಮಾಡಬೇಕು ಎಂದು ತಿಳಿಸಿದ್ದು, ಆಗ ವಿಜಯಲಕ್ಷ್ಮೀಯವರು ರಾತ್ರಿ ವೇಳೆಯಾದ ಕಾರಣ ಸೆಕ್ಯುರಿಟಿ ರೂಂ ಹತ್ತಿರ

ಬರುವಂತೆ ತಿಳಿಸಿದರು. ನಂತರ ನಾವು ವಿಜಯಲಕ್ಷ್ಮೀಯವರ ಮನೆ ಹೊಸಕೆರೆಯ ಹಳ್ಳಿಯ ಪ್ರೆಸ್ಟೀಜ್ ಅಪಾರ್ಟಮೆಂಟ್‌ಗೆ ಹೋದಾಗ, ಅಲ್ಲಿ ವಿಜಯಲಕ್ಷ್ಮೀಯವರು ಸೆಕ್ಯುರಿಟಿ ರೂಂ ಹತ್ತಿರ ಇದ್ದು, ಒಂದು ಬ್ಯಾಗ್‌ನಲ್ಲಿ ಮೂರು ಜೊತೆ ಶೂಗಳು ತಂದು ಹಾಜರುಪಡಿಸಿದ್ದು, ಅದರಲ್ಲಿ ಕೃತ್ಯ ನಡೆದ ದಿನ ಧರಿಸಿದ ಶೂಗಳನ್ನು 2 ನೇ ಆರೋಪಿ ಗುರುತಿಸಿ ತೆಗೆದುಕೊಟ್ಟಿರುತ್ತಾರೆ. ಸದರಿ ಶೂ LOFFER ಕಂಪನಿಯದಾಗಿತ್ತು. ತನಿಖಾಧಿಕಾರಿಯವರು ಸದರಿ ಶೂ ಅನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿ ಸೀಲ್ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ.

42. ಸದರಿ ಶೂಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.115/24 ರಲ್ಲಿನ ಸೀಲಿನಿಂದ ಕೂಡಿದ ವಸ್ತುವನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಪಿಪಿ ಮತ್ತು ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆದು ನೋಡಲಾಗಿ, ಅದರಲ್ಲಿ ಒಂದು ಜೊತೆ ಶೂ ಇದ್ದು, ಅದನ್ನು ಸಾಕ್ಷಿಗೆ ತೋರಿಸಿದಾಗ, ಅದನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ಶೂ ಅನ್ನು **ಮು.ಮಾ.56** ಮತ್ತು ಸೀಲ್ ಕವರ್ ಮೇಲೆ ಇದ್ದ ಈ ಸಾಕ್ಷಿಯ ಸಹಿಯನ್ನು **ಮು.ಮಾ. 56(ಎ)** ಎಂದು ಗುರುತಿಸಲಾಯಿತು.

43. ಜಪ್ತಿ ಮಾಡುವ ಸಮಯದಲ್ಲಿ ತನಿಖಾಧಿಕಾರಿಯವರು ಫೋಟೋಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಗೆ ಈಗ ಒಂದು ಫೋಟೋವನ್ನು

ತೋರಿಸಿದಾಗ, ಸಾಕ್ಷಿ ನೋಡಿ ಅದು 2 ನೇ ಆರೋಪಿ ಮನೆಯಲ್ಲಿ ಪಾದರಕ್ಷೆಯನ್ನು ಹುಡುಕುತ್ತಿರುವಾಗ ತೆಗೆದ ಫೋಟೋ ಆಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಾಲ್ಕು ಫೋಟೋಗಳನ್ನು ತೋರಿಸಿದಾಗ, ಸಾಕ್ಷಿ ಅವುಗಳನ್ನು ನೋಡಿ 2 ನೇ ಆರೋಪಿಯ ಹೆಂಡತಿಯ ಮನೆಯ ಸೆಕ್ಯುರಿಟಿ ರೂಂ ಬಳಿ ತೆಗೆದ ಫೋಟೋಗಳು ಆಗಿರುತ್ತವೆ ಎಂದು ನುಡಿಯುತ್ತಾರೆ.

44. ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋಗಳಿಗೆ ಸಂಬಂದಿಸಿದಂತೆ ಪ್ರಮಾಣ ಪತ್ರ ಇರದ ಕಾರಣ ಗುರುತಿಸಲು ಆಗುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

45. ಮಾನ್ಯ ಪಿಪಿರವರು ಸದರಿ ಪ್ರಮಾಣ ಪತ್ರ ಇನ್ನೊಂದು ಕಡತದಲ್ಲಿ ಇದ್ದ ಬಗ್ಗೆ ತಿಳಿಸಿದ್ದರಿಂದ, ಆಕ್ಷೇಪಣೆಗೆ ಒಳಪಟ್ಟು, ಸದರಿ ಫೋಟೋಗಳನ್ನು **ನಿ.ಪಿ.125 ರಿಂದ 130** ಎಂದು ಗುರುತಿಸಲಾಯಿತು.

46. ಈ ಎಲ್ಲಾ ಪ್ರಕಿಯೆ ಬಗ್ಗೆ ಬೆರಳಚ್ಚು ಮಾಡಲಾಗಿದ್ದು, ಅದರ ಪ್ರಿಂಟ್ ಔಟ್ ತೆಗೆದು ಸಾಕ್ಷಿಯ ಸಹಿ ಪಡೆಯಲಾಗಿತ್ತು. ಸಾಕ್ಷಿ ಈಗ ದಿಃ 14.06.2024 ರಂದು ಮಾಡಿದ ಇನ್ನೊಂದು ಪಂಚನಾಮೆಯನ್ನು ನೋಡಿ, ಅದರ ಎಲ್ಲಾ ಪುಟಗಳಲ್ಲಿ ಅವರ ಸಹಿ ಇರುವ ಬಗ್ಗೆ ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು **ನಿ.ಪಿ.131** ಎಂದು ಅದರಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.131(ಎ)** ಎಂದು ಗುರುತಿಸಲಾಯಿತು. ಜಪ್ತಿ ಮಾಡಿದ

ನಂತರ ವಾಪಸ್ಸು ಆಗುವಾಗ ಸಮಯ ರಾತ್ರಿ 1.30 ಗಂಟೆಯಾಗಿತ್ತು.

47. ಪವನ್ ಮತ್ತು ದರ್ಶನ್ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರು ಇರುವ 3 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಗಳನ್ನು ವಿಸಿ ಮೂಲಕ ಹಾಜರುಪಡಿಸಿದಾಗ, ಸಾಕ್ಷಿ ಅವರಲ್ಲಿ 2 ನೇ ಆರೋಪಿ ದರ್ಶನ್ ರವರನ್ನು ನೋಡಿ ಗುರುತಿಸಿರುತ್ತಾರೆ.

48. ದಿಃ15.06.2024 ರಂದು ಬೆಳಗ್ಗೆ 10.00 ಗಂಟೆಗೆ ಅನ್ನಪೂರ್ಣೇಶ್ವರಿ ಪೊಲೀಸ್ ಠಾಣೆಗೆ ಬಂದಿರುತ್ತೇನೆ. ಆರೋಪವನ್ನು ಒಪ್ಪಿಕೊಳ್ಳುವುದಾಗಿ 17 ನೇ ಆರೋಪಿ-ನಿಖಿಲ್ ನಾಯ್ಕರವರು, 15 ನೇ ಆರೋಪಿಯಿಂದ ರೂ.5 ಲಕ್ಷ ಪಡೆದಿರುವುದಾಗಿ ಅದನ್ನು ಜಪ್ತಿ ಮಾಡುವ ಬಗ್ಗೆ ಪಿಐ ನಾಗೇಶ್‌ರವರು ಪಂಚನಾಮೆಗೆ ಸಹಕರಿಸುವಂತೆ ಪಂಚರ ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸ್‌ನ್ನು ಸಾಕ್ಷಿ ಈಗ ನೋಡಿ ಗುರುತಿಸಿದ್ದು, ಸದರಿ ನೋಟೀಸ್‌ನ್ನು **ನಿ.ಪಿ.132** ಮತ್ತು ಸಾಕ್ಷಿಯ ಸಹಿಯನ್ನು **ನಿ.ಪಿ.132(ಎ)** ಎಂದು ಗುರುತಿಸಲಾಯಿತು.

49. ತನಿಖಾಧಿಕಾರಿಯವರು 17 ನೇ ಆರೋಪಿಗೆ ಹಣದ ಬಗ್ಗೆ ವಿಚಾರಣೆ ಮಾಡಿದಾಗ, 17 ನೇ ಆರೋಪಿಯು, ಸ್ವಲ್ಪ ಹಣವನ್ನು ತನ್ನ ಸ್ವಂತಕ್ಕಾಗಿ ಬಳಕೆ ಮಾಡಿರುವುದಾಗಿ ತಿಳಿಸಿದ್ದು, ಉಳಿದ ಹಣವನ್ನು ಮತ್ತು

ಮೊಬೈಲ್‌ನ್ನು ಒಟ್ಟಿಗೆ ತನ್ನ ಸ್ನೇಹಿತ ಪವನ್ ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ಪಿಐರವರು ಸದರಿ ಪವನ್‌ರವರನ್ನು ಠಾಣೆಗೆ ಕರೆಸಿದ್ದು ತನ್ನನ್ನು ಕರೆದುಕೊಂಡು ಹೋದರೆ ಹಣವನ್ನು ಮತ್ತು ಮೊಬೈಲ್‌ನ್ನು ತೋರಿಸುವುದಾಗಿ ತಿಳಿಸಿದರು.

50. ನಂತರ ತನಿಖಾಧಿಕಾರಿಯವರು, ನಾನು, ಪಿಐ ನಾಗೇಶ್, ಚಾ.ಸಾ.21, ಪವನ್, 17 ನೇ ಆರೋಪಿ ಎಲ್ಲರೂ ಜೊತೆಯಲ್ಲಿ ಬನಶಂಕರಿಯ 6 ನೇ  ಹಂತದಲ್ಲಿ ಇರುವ ಪವನ್ ಮನೆಗೆ ಹೋದೆವು. ನಾವೆಲ್ಲರೂ ಪವನ್‌ರವರ ಮನೆಗೆ ಹೋದಾಗ, ಮನೆಯ ಒಳಗಡೆ ಹೋದಾಗ, ಅಲ್ಲಿ ಎಡಗಡೆ ಇರುವ ಕೋಣೆಯಲ್ಲಿನ ಸಜ್ಜಾದ ಮೇಲೆ ಇದ್ದ ಬಿಳಿ ಬಣ್ಣದ ಕವರ್ ನ್ನು ತಂದು ಹಾಜರುಪಡಿಸಿದರು. ಅದನ್ನು ತೆರೆದು ನೋಡಿದಾಗ ಅದರಲ್ಲಿ ಒಂದು ಹಳದಿ ಬಣ್ಣ ಬ್ಯಾಗು ಇದ್ದು, ಅದನ್ನು ತೆರೆದು ನೋಡಲಾಗಿ ಹಣ ಮತ್ತು ವಿವೋ 30 ಪ್ರೋ ಮೊಬೈಲ್ ಇತ್ತು.

51. ನಂತರ ತನಿಖಾಧಿಕಾರಿಯವರು ನಮ್ಮ ಸಮಕ್ಷಮ ಹಣವನ್ನು ತೆಗೆದು ಲೆಕ್ಕ ಮಾಡಲಾಗಿ, 500 ಮುಖಬೆಲೆಯ ನೋಟುಗಳು ಇದ್ದು, 100 ರ ಒಂದು ಕಟ್ಟಿಲನಂತೆ ಒಟ್ಟು 9 ಕಟ್ಟುಗಳು ಇದ್ದವು. ನಂತರ ಸದರಿ ಹಣವನ್ನು ಮತ್ತು ಮೊಬೈಲ್‌ನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿ, ಪ್ರತ್ಯೇಕವಾದ ಕವರ್ ಗಳಲ್ಲಿ ಹಾಕಿ, ಸೀಲ್ ಮಾಡಿ ಅದರ ಮೇಲೆ ನಮ್ಮ ಸಹಿಗಳನ್ನು

ಪಡೆದುಕೊಂಡರು.

52. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.116/24 ರಲ್ಲಿನ ಐಟಂ ನಂ.2 ಸೀಲಿನಿಂದ ಕೂಡಿದ ವಸ್ತುವನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಪಿಪಿ ಮತ್ತು ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆದು ನೋಡಲಾಗಿ ಅದರಲ್ಲಿ ಒಂದು ಮೊಬೈಲ್ ಇರುತ್ತದೆ. ಸದರಿ ಮೊಬೈಲ್‌ನ್ನು ಮತ್ತು ಸೀಲ್ ಕವರ್ ಮೇಲೆ ಇರುವ ಅವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ಮೊಬೈಲ್‌ನ್ನು **ಮು.ಮಾ.57** ಮತ್ತು ಕವರ್ ಮೇಲೆ ಇರುವ ಈ ಸಾಕ್ಷಿಯ ಸಹಿಯನ್ನು **ಮು.ಮಾ.57(ಎ)** ಎಂದು ಗುರುತಿಸಲಾಯಿತು.

53. ದಿಃ15.06.2024 ರಂದು ಮಾಡಿದ ಪಂಚನಾಮೆಯನ್ನು ಸಾಕ್ಷಿಗೆ ಈಗ ತೋರಿಸಿದಾಗ ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು **ನಿ.ಪಿ.133** ಮತ್ತು ಈ ಸಾಕ್ಷಿಯ ಸಹಿಯನ್ನು **ನಿ.ಪಿ.133(ಎ)** ಎಂದು ಗುರುತಿಸಲಾಯಿತು. ಜಪ್ತಿ ಮಾಡುವ ಸಮಯದಲ್ಲಿ ಫೋಟೋವನ್ನು ಸಹ ತೆಗೆದಿರುತ್ತಾರೆ.

54. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ಒಂದು ಭಾವ ಚಿತ್ರವನ್ನು ನೋಡಿ ಅದರಲ್ಲಿ ಪವನ್ ಹಾಜರು ಇದ್ದು ಸದರಿ ಫೋಟೋವನ್ನು ಹಣ ಮತ್ತು ಮೊಬೈಲ್ ಜಪ್ತಿ ಮಾಡುವ ಕಾಲದಲ್ಲಿ

ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋಗೆ ಸಂಬಂಧಿಸಿದಂತೆ ಪ್ರಮಾಣ ಪತ್ರ ಇರದ ಕಾರಣ ಗುರುತಿಸಲು ಆಗುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

55. ಮಾನ್ಯ ಪಿಪಿರವರು ಸದರಿ ಪ್ರಮಾಣ ಪತ್ರ ಇನ್ನೊಂದು ಕಡತದಲ್ಲಿ ಇದ್ದ ಬಗ್ಗೆ ತಿಳಿಸಿದ್ದರಿಂದ, ಆಕ್ಷೇಪಣೆಗೆ ಒಳಪಟ್ಟು, ಸದರಿ ಫೋಟೋವನ್ನು **ನಿ.ಪಿ.134** ಮತ್ತು ಫೋಟೋದಲ್ಲಿ ಸಾಕ್ಷಿ ಪವನ್‌ರವರನ್ನು ಗುರುತಿಸಿರುವ ಬಗ್ಗೆ ಪವನ್ ಭಾವಚಿತ್ರವನ್ನು **ನಿ.ಪಿ.134(ಎ)** ಎಂದು ಗುರುತಿಸಲಾಯಿತು.

56. ಜಪ್ತಿ ಮಾಡಿರುವ ಹಣವನ್ನು ನೋಡಿದರೆ ಗುರುತಿಸಿರುತ್ತೇನೆ. ನಿ.ಪಿ.133 ಪಂಚನಾಮೆಯನ್ನು ಸುಮಾರು ಬೆಳಗ್ಗೆ 11.45 ರವರೆಗೆ ಜರುಗಿಸಲಾಗಿತ್ತು.

57. ದಿಃ20.06.2024 ರಂದು ಎಸಿಪಿ ಚಂದನ್‌ರವರಿಂದ ನಮ್ಮ ಮೇಲಾಧಿಕಾರಿಯಾದ ಜಂಟಿ ಆಯುಕ್ತರಿಗೆ ಪಂಚನಾಮೆ ನೋಟೀಸ್ ಜಾರಿ ಮಾಡಿರುತ್ತಾರೆ. ಅದರಂತೆ ನಮ್ಮ ಜಂಟಿ ಆಯುಕ್ತರು ನನ್ನನ್ನು ಮತ್ತು ಚಾ.ಸಾ.21 ರವರನ್ನು ಪಂಚರಾಗಿ ಸಹಕರಿಸುವಂತೆ ತಿಳಿಸಿರುತ್ತಾರೆ. ಸಾಕ್ಷಿ ಈಗ ಎಸಿಪಿ ಚಂದನ್ ರವರು ಕೊಟ್ಟ ತಿಳುವಳಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನೋಟೀಸ್‌ನ್ನು **ನಿ.ಪಿ.135** ಮತ್ತು ಸಾಕ್ಷಿಯ ಸಹಿಯನ್ನು **ನಿ.ಪಿ.135(ಎ)** ಎಂದು ಗುರುತಿಸಲಾಯಿತು.

58. ನಿ.ಪಿ.135ರ ನೋಟೀಸ್ ಅನ್ವಯ ನಾನು ಮತ್ತು ಚಾ.ಸಾ.21ರವರು ರಾತ್ರಿ 8.30ಗಂಟೆ ಸಮಯಕ್ಕೆ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಗೆ ಹೋಗಿ ಅಲ್ಲಿ ಚಂದನ್‌ರವರನ್ನು ಬೇಟಿ ಮಾಡಿರುತ್ತೇವೆ. ಆಗ, ಚಂದನ್‌ರವರು, ಪುನೀತ್‌ರವರು ರೇಣುಕಾಸ್ವಾಮಿ ಮತ್ತು ಚಿತ್ರದುರ್ಗದಿಂದ ಬಂದ ಇನ್ನೊಬ್ಬ ವ್ಯಕ್ತಿಯ ಚಿತ್ರಗಳನ್ನು ಮೊಬೈಲ್‌ನಲ್ಲಿ ತೆಗೆದಿರುವುದಾಗಿ ಹಾಗೂ ಸದರಿ ಮೊಬೈಲ್‌ನ್ನು ಹಾಜರುಪಡಿಸುವುದಾಗಿ ತಿಳಿಸಿದ್ದು ಅದನ್ನು ಜಪ್ತಿ ಮಾಡಿಕೊಳ್ಳಲು ಪಂಚರಾಗಿ ಸಹಕರಿಸುವಂತೆ ತಿಳಿಸಿದರು. ಆ ಸಮಯದಲ್ಲಿ ಠಾಣೆಯಲ್ಲಿ ಚಂದನ್, ನಾನು, ಚಾ.ಸಾ.21, ಪುನೀತ್ ಮತ್ತು ಅವರ ಸ್ನೇಹಿತ ಹಾಜರು ಇದ್ದೆವು.

59. ನಂತರ ಎಸಿಪಿ ಚಂದನ್‌ರವರು, ಸದರಿ ಫೋಟೋಗಳನ್ನು ಡಿಲೀಟ್ ಮಾಡಿದ ಬಗ್ಗೆ ಪುನೀತ್ ರವರ ತಿಳಿಸಿದ್ದು, ಅದರಂತೆ ಮೊಬೈಲ್ ಹಾಜರುಪಡಿಸಿರುತ್ತಾರೆ. ಸದರಿ ಮೊಬೈಲ್ ತೆಗೆದು ನೋಡಲಾಗಿ ಯಾವುದೇ ಫೋಟೋಗಳು ಇರುವುದಿಲ್ಲ. ಸದರಿ ಮೊಬೈಲ್ ಬಿಳಿ ಬಣ್ಣದ ಸ್ಯಾಮ್‌ಸಂಗ್ ಮೊಬೈಲ್ ಆಗಿತ್ತು. ಸದರಿ ಮೊಬೈಲ್‌ನಲ್ಲಿ ಒಂದು ಸಿಮ್ ಕಾರ್ಡ ಇತ್ತು. ಸಾಮಾಜಿಕ ಜಾಲತಾಣದ ಐಡಿಗಳನ್ನು ಪಡೆದರು. ನಂತರ ಸದರಿ ಮೊಬೈಲ್‌ನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿಕೊಂಡು ಸೀಲ್ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡರು.

60. ಸದರಿ ಮೊಬೈಲ್ ನೋಡಿದರೆ ಗುರುತಿಸುತೆತೇನೆ. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.140/24 ರಲ್ಲಿನ ಸೀಲಿನಿಂದ ಕೂಡಿದ ವಸ್ತುವನ್ನು ಹಾಜರುಪಡಿಸಿದ್ದು, ಅದನ್ನು ತೆರೆದ ನ್ಯಾಯಾಲಯದಲ್ಲಿ ಮಾನ್ಯ ಪಿಪಿ ಮತ್ತು ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆದು ನೋಡಲಾಗಿ ಅದರಲ್ಲಿ ಒಂದು ಮೊಬೈಲ್ ಇರುತ್ತದೆ. ಸದರಿ ಮೊಬೈಲ್‌ನ್ನು ಸಾಕ್ಷಿಗೆ ತೋರಿಸಿದಾಗ, ಅದನ್ನು ನೋಡಿ ಗುರುತಿಸುತ್ತಾರೆ. ಸದರಿ ಮೊಬೈಲ್‌ನ್ನು **ಮು.ಮಾ.58** ಮತ್ತು ಸೀಲ ಕವರ್ ಮೇಲೆ ಇದ್ದ ಈ ಸಾಕ್ಷಿಯ ಸಹಿಯನ್ನು **ಮು.ಮಾ.58(ಎ)** ಎಂದು ಗುರುತಿಸಲಾಯಿತು.

61. ಸದರಿ ಸಮದಲ್ಲಿ ಫೊಟೋಗಳನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಗೆ ಈಗ ಸದರಿ ಸಮಯದಲ್ಲಿ ತೆಗೆದ ಎರಡು ಫೊಟೋಗಳನ್ನು ತೋರಿಸಿದಾಗ, ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೊಟೋಗಳಿಗೆ ಸಂಬಂದಿಸಿದಂತೆ ಪ್ರಮಾಣ ಪತ್ರ ಇರದ ಕಾರಣ ಗುರುತಿಸಲು ಆಗುವುದಿಲ್ಲ ಎಂದು ಆಕ್ಷೇಪಿಸಿರುತ್ತಾರೆ.

62. ಮಾನ್ಯ ಪಿಪಿರವರು ಸದರಿ ಪ್ರಮಾಣ ಪತ್ರ ಇನ್ನೊಂದು ಕಡತದಲ್ಲಿ ಇದ್ದ ಬಗ್ಗೆ ತಿಳಿಸಿದ್ದರಿಂದ, ಆಕ್ಷೇಪಣೆಗೆ ಒಳಪಟ್ಟು, ಸದರಿ ಎರಡು ಫೊಟೋಗಳನ್ನು ಒಟ್ಟಾಗಿ **ನಿ.ಪಿ.136** ಎಂದು ಗುರುತಿಸಲಾಯಿತು. ಸದರಿ ಫೊಟೋದಲ್ಲಿ ಸಾಕ್ಷಿ ಗುರುತಿಸಿದ ಪುನೀತ್ ವ್ಯಕ್ತಿಯ ಚಿತ್ರವನ್ನು **ನಿ.ಪಿ.136(ಎ)**

ಮತ್ತು ಪುನೀತ್ ಸ್ನೇಹಿತ ಮೊಹನ್ ಕುಮಾರ್ ರವರ ಚಿತ್ರವನ್ನು **ನಿ.ಪಿ.136(ಬಿ)**.

63. ನಂತರ ತನಿಖಾಧಿಕಾರಿಯವರು ಪುನೀತ್ ಸ್ನೇಹಿತ ಮೊಹನ್ ಕುಮಾರ್ ರವರ ಮೊಬೈಲ್ ನ್ನು ಸಹ ಜಪ್ತಿ ಮಾಡಲಾಯಿತು. ಸದರಿ ಮೊಬೈಲ್ ಐಫೋನ್ 15 ಆಗಿರುತ್ತದೆ. ಮೊಹನ್ ರವರ ಮೊಬೈಲ್ ಸೀಲ್ ಮಾಡಿ ಅವರ ಸಾಮಾಜಿಕ ಜಾಲತಾಣದ ಐಡಿಗಳನ್ನು ಪಡೆಯಲಾಗಿತ್ತು. ನಂತರ ನಮ್ಮ ಸಮಕ್ಷಮ ಟೈಪ್ ಮಾಡಿ ಪ್ರಿಂಟ್ ತೆಗೆಯಲಾಗಿತ್ತು. ದಿಃ20.06.2024 ರ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು **ನಿ.ಪಿ.137** ಮತ್ತು ಈ ಸಾಕ್ಷಿಯ ಸಹಿಯನ್ನು **ನಿ.ಪಿ.137(ಎ)** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ, ಮಾನ್ಯ ಪಿಪಿರವರ ಕೋರಿಕೆ ಮೆರೆಗೆ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**C/c 58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**ದಿನಾಂಕ:04.08.2026 ರಂದು ಸಮಯ 1.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ವಿಶೇಷ್ ಪ್ರಾಜ್ಞ ಪಿಪಿ ರವರಿಂದ:**

64. ನಾನು ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.3 ರಲ್ಲಿ ಸಾಕ್ಷ್ಯ ನುಡಿದಂತೆ, ದಿ:14.06.2024 ರಂದು ನಮ್ಮ ಕಛೇರಿಗೆ ವಿಜಯನಗರ ಸಹಾಯಕ ಪೋಲೀಸ್ ಆಯುಕ್ತರ ಕಛೇರಿಯಿಂದ ಬಂದ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಸದರಿ ಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿರುತ್ತಾರೆ.

65. At this stage, Ld. Designated Sr. counsel for A2 objected submitting that he is not the author of the said letter. But the witness has stated that he can identify the said letter sent to his office. Hence, the said letter is marked as **Ex.P149**.

66. ಸಾಕ್ಷಿಗೆ ಈಗ ಇನ್ನೊಂದು ಪತ್ರವನ್ನು ತೋರಿಸಿದಾಗ, ಅದನ್ನು ನೋಡಿ ನಿ.ಪಿ.149 ನ್ನು ಪಡೆದ ನಂತರ ತಮ್ಮ ಮೇಲಾಧಿಕಾರಿಗಳು ಈ ಪತ್ರವನ್ನು ತಮಗೆ ನೀಡಿ ಸಹಾಯಕ ಪೊಲೀಸ್ ಆಯುಕ್ತರ ಕಛೇರಿಗೆ ಹೋಗಬೇಕು ಎಂದು ಸೂಚಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು **ನಿ.ಪಿ.150** ಎಂದು ಗುರುತಿಸಲಾಯಿತು.

67. ನಾನು ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.5 ರಲ್ಲಿ ಸಾಕ್ಷ್ಯ ನುಡಿದಂತೆ, ದಿಃ20.06.2024 ರಂದು ನಮ್ಮ ಕಛೇರಿಗೆ ವಿಜಯನಗರ ಸಹಾಯಕ ಪೋಲೀಸ್ ಆಯುಕ್ತರ ಕಛೇರಿಯಿಂದ ಬಂದ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಸದರಿ ಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪತ್ರವನ್ನು **ನಿ.ಪಿ.151** ಎಂದು ಗುರುತಿಸಲಾಯಿತು.

68. ಸಾಕ್ಷಿಗೆ ಈಗ ಇನ್ನೊಂದು ಪತ್ರವನ್ನು ತೋರಿಸಿದಾಗ, ಅದನ್ನು ನೋಡಿ ನಿ.ಪಿ.151 ಪಡೆದ ನಂತರ ತಮ್ಮ ಮೇಲಾಧಿಕಾರಿಗಳು ಈ ಪತ್ರವನ್ನು ತಮಗೆ ನೀಡಿ ಸಹಾಯಕ ಪೊಲೀಸ್ ಆಯುಕ್ತರ ಕಛೇರಿಗೆ ಹೋಗಬೇಕು ಎಂದು ಸೂಚಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪತ್ರವನ್ನು **ನಿ.ಪಿ.152** ಎಂದು ಗುರುತಿಸಲಾಯಿತು.

69. ನಾನು ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.8 ರಲ್ಲಿ, ದಿಃ16.06.2024 ರಂದು ನಿ.ಪಿ.117-ಮಹಜರ್ ಸಮಯದಲ್ಲಿ ಮೂಲಕ ಅಮಾನತ್ತುಪಡಿಸಿಕೊಂಡ ರಿಜಿಸ್ಟರ್ ಪ್ರತಿ ಮತ್ತು ಆಧಾರ್ ಕಾರ್ಡ ಪ್ರತಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತೇನೆ. (ಆದರೆ ಸದರಿ ದಾಖಲೆಗಳು ಜೆರಾಕ್ಸ ಪ್ರತಿಗಳಾದ ಕಾರಣ ಅವುಗಳನ್ನು ಗುರುತಿಸಲಾಗಿರುವುದಿಲ್ಲ).

70. ಈ ಹಂತದಲ್ಲಿ ಮಾನ್ಯ ಎಸ್‌ಪಿಪಿರವರು ಸದರಿ ದಾಖಲೆಗಳಲ್ಲಿ ಈ ಸಾಕ್ಷಿಯ ಮೂಲ ಸಹಿಗಳು ಮತ್ತು ತನಿಖಾಧಿಕಾರಿಗಳ ಸಹಿ ಇರುವುದರಿಂದ ಸದರಿ ಆಧಾರ್ ಕಾರ್ಡ್‌ನ ನಂಬರ್ ಮಾತ್ರ ಸಾಕ್ಷಿಗೆ ತೋರಿಸಿ ಅದನ್ನು ಗುರುತಿಸಲು ಅವಕಾಶವನ್ನು ಕೋರಿರುತ್ತಾರೆ.

71. ಆದರೆ ಮಾನ್ಯ ಹಿರಿಯ ಆರೋಪಿ ಪರ ವಕೀಲರ ಸದರಿ ದಾಖಲೆಗಳನ್ನು ಕುರಿತು ಈಗಾಗಲೇ ಈ ಸಾಕ್ಷಿಯ ಮುಖ್ಯವಿಚಾರಣೆಯ ಪ್ಯಾರ ನಂ.9 ರಿಂದ 12 ರಲ್ಲಿ ಸದರಿ ದಾಖಲೆಗಳಿಗೆ ಕುರಿತು ಆದೇಶ ಆಗಿರುತ್ತದೆ ಎಂದು ಹಾಗೂ ಆ ದಾಖಲೆಗಳ contents ಗಳನ್ನು ಗುರುತಿಸಲು ಆಗುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ.

72. Heard and perused. The witness has deposed in para No.8 that he can identify the register and the copy of Aadhar Card of Karthik which were seized through the mahazar at Ex.P117. As the witness has signed the copies of the register and Aadhar card on Karthik, only to the extent of Aadhar number he is permitted to depose, which will assist the court in identifying the name and identity of the person relating

to the Aadhar Card

73. ಸಾಕ್ಷಿಗೆ ಈಗ ಸದರಿ ಆಧಾರ್ ಕಾರ್ಡ ನ ಪ್ರತಿಯನ್ನು ನೋಡಿ ಅದರಲ್ಲಿ ವಿ.ಕಾರ್ತಿಕ್‌ರವರ ಆಧಾರ್ ನಂ. 346 110 140 561 ಎಂದು ಇದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.8 ಮತ್ತು 16 ರಲ್ಲಿ ದಿಃ16.04.2024 ರಂದು ಮಹಜರ್ ಸಮಯದಲ್ಲಿ ಒಂದು ಫೋಟೋವನ್ನು ತೆಗೆದಿರುತ್ತಾರೆ ಎಂದು ನುಡಿದಿರುತ್ತೇನೆ. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ.

74. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗೆ ಸಂಬಂದಿಸಿದ 65 ಬಿ ಪ್ರಮಾರಣ ಪತ್ರವನ್ನು ಮಾನ್ಯ ಎಸ್‌ಪಿಪಿರವರು ಹಾಜರುಪಡಿಸಿದ್ದರಿಂದ, ಸದರಿ ಫೋಟೋವನ್ನು **ನಿ.ಪಿ.153** ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಕಾಣಿಸುವ ವ್ಯಕ್ತಿಗಳನ್ನು ಗುರುತಿಸಲು ಆಗುತ್ತದೆ. ಎಡದಿಂದ ಬಲಕ್ಕೆ ಬೆರಳಚ್ಚು ಮಾಡುತ್ತಿರುವ ವ್ಯಕ್ತಿ ಪೊಲೀಸ್ ಸಿಬ್ಬಂದಿ, ಅವರ ಪಕ್ಕದಲ್ಲಿ ನಾಗೇಶ್ ಪಿಐ, ಅವರ ಹಿಂದೆ ಒಬ್ಬ ಪೊಲೀಸ್ ಸಿಬ್ಬಂದಿ, ಅವರ ಪಕ್ಕದಲ್ಲಿ ನನ್ನ ಸಹೋದ್ಯೋಗಿ ವೇಣುಗೋಪಾಲ(ಚಾ.ಸಾ.21), ಅವರ ಪಕ್ಕದಲ್ಲಿ ನಾನು, ನನ್ನ ಪಕ್ಕದಲ್ಲಿ ಒಬ್ಬ ಪೊಲೀಸ್ ಸಿಬ್ಬಂದಿ ಹಾಗೂ ಅವರ ಪಕ್ಕದಲ್ಲಿ ಕಾರ್ತಿಕ್ (15 ನೇ ಆರೋಪಿ) ಇದ್ದಾರೆ ಎಂದು ಗುರುತಿಸಿರುತ್ತಾರೆ.

75. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.35 ರಲ್ಲಿ ಸಾಕ್ಷ್ಯ ನುಡಿದಂತೆ ಒಟ್ಟು ನಾಲ್ಕು ಫೋಟೋಗಳನ್ನು ತೆಗೆದಿದ್ದು, ಅವುಗಳನ್ನು ಈಗಾಗಲೇ ನಿ.ಪಿ.121 ರಿಂದ 124 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳಲ್ಲಿ ಇರುವ ವ್ಯಕ್ತಿಗಳನ್ನು ನೋಡಿದರೆ ಗುರುತಿಸಲು ಆಗುತ್ತದೆ. ಸಾಕ್ಷಿಗೆ ಈಗ ಸದರಿ ನಿ.ಪಿ.121 ಫೋಟೋವನ್ನು ತೋರಿಸಿದಾಗ, ಎಡದಿಂದ ಬಲಕ್ಕೆ ದರ್ಶನ್(2 ನೇ ಆರೋಪಿ), ಅವರ ಪಕ್ಕದಲ್ಲಿ ನನ್ನ ಸಹೋದ್ಯೋಗಿ ವೇಣುಗೋಪಾಲ (ಚಾ.ಸಾ.21), ಅವರ ಪಕ್ಕದಲ್ಲಿ ಎಸಿಪಿ ಚಂದನ್, ಅವರ ಪಕ್ಕದಲ್ಲಿ ನಾನು, ನನ್ನ ಹಿಂದೆ ನಿಂತಿರುವ ವ್ಯಕ್ತಿ ಪೊಲೀಸ್ ಸಿಬ್ಬಂದಿ, ಅವರ ಪಕ್ಕದಲ್ಲಿ ಇಬ್ಬರು ವ್ಯಕ್ತಿಗಳು ಎಫ್.ಎಸ್.ಎಲ್ ತಂಡದವರಾಗಿರುತ್ತಾರೆ, ಅವರ ಹಿಂದೆ ಒಬ್ಬ ಪೊಲೀಸ್ ಸಿಬ್ಬಂದಿ ಬೆರಳಚ್ಚು ಮಾಡುತ್ತಿದ್ದಾರೆ, ಅವರ ಪಕ್ಕದಲ್ಲಿ ಪವನ್(3 ನೇ ಆರೋಪಿ), ಅವರ ಪಕ್ಕದಲ್ಲಿ ಪೊಲೀಸ್ ಸಿಬ್ಬಂದಿ ಹಾಗೂ ಅವರ ಪಕ್ಕದಲ್ಲಿ ಎಫ್.ಎಸ್.ಎಲ್ ತಂಡದ ಸಿಬ್ಬಂದಿ ಇರುತ್ತಾರೆ ಎಂದು ಗುರುತಿಸಿರುತ್ತಾರೆ.

76. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.45 ರಲ್ಲಿ ಸಾಕ್ಷ್ಯ ನುಡಿದಂತೆ ಒಟ್ಟು ನಾಲ್ಕು ಫೋಟೋಗಳನ್ನು ತೆಗೆದಿದ್ದು ಅವುಗಳನ್ನು ಈಗಾಗಲೇ ನಿ.ಪಿ.127 ರಿಂದ 130 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳಲ್ಲಿ ಇರುವ ವ್ಯಕ್ತಿಗಳನ್ನು ನೋಡಿದರೆ ಗುರುತಿಸಲು ಆಗುತ್ತದೆ. ಸಾಕ್ಷಿಗೆ ಈಗ ಸದರಿ ನಿ.ಪಿ.128 ಫೋಟೋವನ್ನು ತೋರಿಸಿದಾಗ, ಎಡದಿಂದ ಬಲಕ್ಕೆ ನನ್ನ

ಸಹೋದ್ಯೋಗಿ ವೇಣುಗೋಪಾಲ(ಚಾ.ಸಾ.21), ಅವರ ಪಕ್ಕದಲ್ಲಿ ನಾನು, ನನ್ನ ಪಕ್ಕದಲ್ಲಿ ಎಸಿಪಿ ಚಂದನ್, ಅವರ ಪಕ್ಕದಲ್ಲಿ ವಿಜಯಲಕ್ಷ್ಮೀ(ಚಾ.ಸಾ.84) ಇರುತ್ತಾರೆ ಎಂದು ಗುರುತಿಸಿರುತ್ತಾರೆ.

77. ಸಾಕ್ಷಿಗೆ ಈಗ ಸದರಿ ನಿ.ಪಿ.127 ಫೋಟೋವನ್ನು ತೋರಿಸಿದಾಗ, ವಿಜಯಲಕ್ಷ್ಮೀ(ಚಾ.ಸಾ.84)ರವರು 2 ನೇ ಆರೋಪಿಗೆ ಸಂಬಂದಿಸಿದ ಶೂಗಳು ಇರುವ ಒಂದು ಚೀಲವನ್ನು ಹಾಜರುಪಡಿಸಿರುತ್ತಾರೆ ಎಂದು ಗುರುತಿಸಿರುತ್ತಾರೆ. ಸಾಕ್ಷಿಗೆ ಈಗ ಸದರಿ ನಿ.ಪಿ.129 ಫೋಟೋವನ್ನು ತೋರಿಸಿದಾಗ, ವಿಜಯಲಕ್ಷ್ಮೀ(ಚಾ.ಸಾ.84)ರವರು ಚೀಲದಿಂದ ಶೂವನ್ನು ತೆಗೆದು ಎಫ್.ಎಸ್.ಎಲ್ ತಂಡದವರಿಗೆ ಕೊಡುತ್ತಿರುವುದು ಕಾಣುತ್ತಿದೆ ಎಂದು ಗುರುತಿಸಿರುತ್ತಾರೆ. ಸದರಿ ಫೋಟೋದಲ್ಲಿ ನನ್ನ ಸಹೋದ್ಯೋಗಿ ವೇಣುಗೋಪಾಲ(ಚಾ.ಸಾ.21) ಮತ್ತು ಎಸಿಪಿ ಚಂದನ್ ರವರು ಇರುವುದನ್ನು ಗುರುತಿಸಿರುತ್ತಾರೆ.

78. ಸಾಕ್ಷಿಗೆ ಈಗ ಸದರಿ ನಿ.ಪಿ.130 ಫೋಟೋವನ್ನು ತೋರಿಸಿದಾಗ, ವಿಜಯಲಕ್ಷ್ಮೀ(ಚಾ.ಸಾ.84)ರವರು ಚೀಲದಿಂದ ಇನ್ನೊಂದು ಶೂವನ್ನು ತೆಗೆದು ಎಫ್.ಎಸ್.ಎಲ್ ತಂಡದವರಿಗೆ ಕೊಡುತ್ತಿರುವುದು ಕಾಣುತ್ತಿದೆ ಎಂದು ಗುರುತಿಸಿರುತ್ತಾರೆ. ಸದರಿ ಫೋಟೋದಲ್ಲಿ ನನ್ನ ಸಹೋದ್ಯೋಗಿ ವೇಣುಗೋಪಾಲ(ಚಾ.ಸಾ.21) ಮತ್ತು ಎಸಿಪಿ ಚಂದನ್ ರವರು ಇರುವುದನ್ನು

ಗುರುತಿಸಿರುತ್ತಾರೆ.

79. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.55 ರಲ್ಲಿ, ನಾನು ಸಾಕ್ಷ್ಯ ನುಡಿದಂತೆ, ದಿಃ15.06.2024 ರಂದು ಅಮಾನತ್ತುಪಡಿಸಿಕೊಂಡ 500/- ಮುಖಬೆಲೆಯ 100 ನೋಟುಗಳು ಒಳಗೊಂಡ 9 ಕಟ್ಟುಗಳನ್ನು ನೋಡಿದರೆ ಗುರುತಿಸುತ್ತೇನೆ.

80. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.116/2024, dtd. 15.06.2024(PR.No.1755/2025)ರಲ್ಲಿನ ಸೀಲಿನಿಂದ ಕೂಡಿದ ಒಂದು ಕವರ್ ನ್ನು ಹಾಜರುಪಡಿಸಿದ್ದು, ಅದನ್ನು ತೆರದ ನ್ಯಾಯಾಲಯದಲ್ಲಿ ಮಾನ್ಯ ಎಸ್.ಪಿ.ಪಿ ಮತ್ತು ಮಾನ್ಯ ಆರೋಪಿಗಳ ಪರ ವಕೀಲರ ಸಮಕ್ಷಮ ತೆರೆದು ನೋಡಲಾಗಿ, ಅದರಲ್ಲಿ 500/- ಮುಖಬೆಲೆಯ 100 ನೋಟುಗಳು ಒಳಗೊಂಡ 9 ಕಟ್ಟುಗಳು ಇದ್ದು, ಅವುಗಳ ಒಟ್ಟು ಮೊತ್ತ ರೂ.4,50,000/- ಇರುವುದು ಕಂಡುಬರುತ್ತದೆ. ಸಾಕ್ಷಿ ಸದರಿ ನಗದು ಹಣವನ್ನು ತೋರಿಸಿದಾಗ ನೋಡಿ ಗುರುತಿಸಿರುತ್ತಾರೆ. ಸದರಿ ಮೊತ್ತವನ್ನು ಒಟ್ಟಾಗಿ **ಮು.ಮಾ.59** ಎಂದು ಗುರುತಿಸಲಾಯಿತು.

81. ಸದರಿ ಹಣವನ್ನು ವಶಪಡಿಸಿಕೊಂಡ ನಂತರ ಅದನ್ನು ಒಂದು ಕವರ್ ಗೆ ಹಾಕಿ ಸೀಲ್ ಮಾಡಿ ನಮ್ಮ ಸಹಿಗಳನ್ನು ಒಳಗೊಂಡ ಚೀಟಿಗಳನ್ನು ಅಂಟಿಸಿರುತ್ತಾರೆ. ಸಾಕ್ಷಿ ಈಗ ಸದರಿ ಕವರ್ ನ್ನು ಮತ್ತು ಚೀಟಿಯನ್ನು

ತೋರಿಸಿದಾಗ ನೋಡಿ ಗುರುತಿಸಿರುತ್ತಾರೆ. ಸದರಿ ಕವರ್ ಮೇಲೆ ಇರುವ ಚೀಟಿಯನ್ನು ನೋಡಿ ಅದರಲ್ಲಿ ರೂ.4,50,000/- ನಗದು ಹಣವನ್ನು ನಮೂದಿಸಿರುವುದನ್ನು, ತಮ್ಮ ಹಾಗೂ ಚಾ.ಸಾ.21 ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಕವರ್ ನ್ನು **ನಿ.ಪಿ.154** ಮತ್ತು ಈ ಸಾಕ್ಷಿಯ ಸಹಿಯನ್ನು **ನಿ.ಪಿ.154(ಎ)** ಎಂದು ಗುರುತಿಸಲಾಯಿತು.

82. ನಾನು ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.63 ರಲ್ಲಿ ಮೊಹನ್ ಕುಮಾರ್ ರವರ ಮೊಬೈಲ್ ನ್ನು ಜಪ್ತಿ ಮಾಡಲಾಗಿತ್ತು ಎಂದು ನುಡಿದಿದ್ದು, ಸದರಿ ಮೊಬೈಲ್ ನ್ನು ನೋಡಿದರೆ ಗುರುತಿಸುತ್ತೇನೆ.

**(ಸಮಯ 2.15 ಗಂಟೆ, ಈ ಹಂತದಲ್ಲಿ ಮಾನ್ಯ ವಿಶೇಷ ಪಿಪಿರವರು ದಿಃ23.04.2025 ರ ಈ ನ್ಯಾಯಾಲಯದ ಆದೇಶದಂತೆ ಸದರಿ ಮೊಬೈಲ್‌ನ್ನು ಚಾ.ಸಾ.90-ಮೋಹನ್ ಕುಮಾರ್ ರವರಿಗೆ ಬಿಡುಗಡೆ ಮಾಡಿದ್ದು, ಸದರಿ ಮೊಬೈಲ್ ಸಾಕ್ಷಿ ವಿಚಾರಣೆಗೆ ಅವಶ್ಯಕವಾಗಿದ್ದರಿಂದ, ಸದರಿ ಮೊಬೈಲ್‌ನ್ನು ಚಾ.ಸಾ.90 ರವರಿಗೆ ಹಾಜರುಪಡಿಸಲು ನಿರ್ದೇಶನ ನೀಡಲು ಕೋರಿಕೊಂಡಿರುತ್ತಾರೆ. ಆದ್ದರಿಂದ ಮುಂದುವರೆದ ಮುಖ್ಯವಿಚಾರಣೆ ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**ದಿನಾಂಕ:11.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ಪ್ರಾಙ್ಞ ಪಿಪಿ ರವರಿಂದ:**

83. ದಿ:04.08.2026 ರಂದು ನನ್ನ ಸಾಕ್ಷಿ ವಿಚಾರಣೆ ಸಮಯದಲ್ಲಿ ಮೋಹನ್ ಕುಮಾರ್ ರವರಿಂದ ಜಪ್ತಿ ಮಾಡಲಾಗದ ಮೊಬೈಲ್‌ನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿದಿರುತ್ತೇನೆ. ಈ ದಿನ ಚಾ.ಸಾ.90(ಪ್ರಾ.ಸಾ.22) ಮೊಹನ್ ಕುಮಾರ್ ರವರು ನ್ಯಾಯಾಲಯದಲ್ಲಿ ಹಾಜರು ಇದ್ದು ತಮ್ಮ ಮೊಬೈಲ್ ನ್ನು ಹಾಜರುಪಡಿಸಿರುತ್ತಾರೆ. ಸದರಿ ಮೊಬೈಲ್‌ನ್ನು ಸಾಕ್ಷಿಗೆ ತೋರಿಸಿದಾಗ, ಸಾಕ್ಷಿ ಅದನ್ನು ನೋಡಿ ಅದರಲ್ಲಿ *#06# ಡೈಲ್ ಮಾಡಿ ನೋಡಿ ಅದರಲ್ಲಿ ಇರುವ IMEI 359793755858583 ಮತ್ತು IMEI2 359793755176010 ಇದೆ ಎಂದು ನುಡಿದಿರುತ್ತಾರೆ. ಇದೇ ಮೊಬೈಲ್‌ನ್ನು ನಿ.ಪಿ.137 ರಂತೆ ಮಹಜರ್ ಮೂಲಕ ದಿ:20.06.2024 ರಂದು ಮೊಹನ್ ಕುಮಾರ್ ರವರಿಂದ ವಶಪಡಿಸಿಕೊಂಡ ಮೊಬೈಲ್ ಎಂದು ಗುರುತಿಸಿರುತ್ತಾರೆ. ಸದರಿ ಮೊಬೈಲ್‌ನ್ನು ಈಗಾಗಲೇ ನಿ.ಪಿ.161 ಎಂದು ಗುರುತಿಸಲಾಗಿದೆ.

**ಪಾಟಿಸವಾಲು 2 ನೇ ಆರೋಪಿ ಪರ ಪದಾಂಕಿತ ಹಿರಿಯ ಶ್ರೀ. ಹೆಚ್.ಪಿ ವಕೀಲರಿಂದ:**

84. ನಾನು ಕಳೆದ 5 ವರ್ಷಗಳಿಂದ BBMP Joint Commissioner Office ನಲ್ಲಿ ಕರ್ತವ್ಯ ನಿರ್ವಹಿಸಿರುತೆತೀನೆ. ನಮ್ಮ ಕಛೇರಿಯಲ್ಲಿ ಈಗ 22 ಜನ ಸಿಬ್ಬಂದಿಗಳು ಕರ್ತವ ನಿರ್ವಹಿಸಿರುತ್ತಾರೆ. ನಮ್ಮ

ಕಛೇರಿ ಆರ್.ಆರ್.ನಗರದ ಐಡಿಎಲ್ ಹೋಮ್ಸ್ ಹತ್ತಿರ 18 ನೇ ಕ್ರಾಸ್‌ನಲ್ಲಿ ಇದೆ. ನಾನು ವಾಸವಾಗಿರುವ ಮನೆ ನಮ್ಮ ಕಛೇರಿಯಿಂದ ಸುಮಾರು 4-4.5 ಕಿವೀ.ಮಿ ಅಂತರದಲ್ಲಿ ಇದೆ.

85. ಆರ್.ಆರ್.ನಗರದಲ್ಲಿ ಇರುವ Main-Main buildings ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಕಛೇರಿಯಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ನಮ್ಮ ಕಛೇರಿಯಿಂದ 98 Street Hotel 2 ಕೀ.ಮಿ ಅಂತರದಲ್ಲಿ ಇದೆ. ಅದೇ ರೀತಿ ನಮ್ಮ ಕಛೇರಿಯಿಂದ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಮತ್ತು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆ ಎಷ್ಟು ದೂರದಲ್ಲಿ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಮ್ಮ ಕಛೇರಿಯಿಂದ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಮತ್ತು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆ ಸುಮಾರರು 10-12 ಕೀ.ಮಿ ದೂರದಲ್ಲಿ ಇವೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

86. ಕಾಮಾಕ್ಷಿಪಾಳ್ಯ ಪೊಲೀಸರು ನಮ್ಮ Joint Commissioner ರವರಿಗೆ ನೀಡಿದ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಪತ್ರದಲ್ಲಿ ಏನು ಬರೆದಿದೆ ಎಂದು ನೋಡಿದ್ದೇನೆ. ಸದರಿ ಪತ್ರದಲ್ಲಿ ನಿಮ್ಮ ಕಛೇರಿಯ ಸಿಬ್ಬಂದಿಗಳನ್ನೇ ಕಳುಹಿಸಿಕೊಡಿ ಎಂದು ಬರೆದಿದ್ದರೇ ಎಂದರೆ, ಸಾಕ್ಷಿ ಇಬ್ಬರು ಸಿಬ್ಬಂದಿಗಳನ್ನು ಕಳುಹಿಸಿಕೊಡಿ ಎಂದು ಬರೆದಿದ್ದರು ಎನ್ನುತ್ತಾರೆ. ನಮ್ಮ

ಮೇಲಾಧಿಕಾರಿಗಳು ನಿಮ್ಮನ್ನು ಆಯ್ಕೆ ಮಾಡಿದ್ದರೇ ಅಥವಾ ಪೊಲೀಸರು ನಿಮ್ಮನ್ನು ಆಯ್ದ್ದ ಮಾಡಿದ್ದರೇ ಎಂದರೆ, ಸಾಕ್ಷಿ ನಮ್ಮ ಮೇಲಾಧಿಕಾರಿಗಳು ನನ್ನನ್ನು ಮತ್ತು ವೇಣುಗೋಪಾಲ್ (ಚಾ.ಸಾ.21)ರವರನ್ನು ನೇಮಕ ಮಾಡಿದ್ದರು ಎನ್ನುತ್ತಾರೆ.

87. ನಮ್ಮ ಮೇಲಾಧಿಕಾರಿಗಳು ಬರವಣಿಗೆಯಲ್ಲಿ ಆದೇಶ ನೀಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೌಖಿಕವಾಗಿ ಆದೇಶ ಮಾಡಿದ್ದರು ಎನ್ನುತ್ತಾರೆ. ನಮ್ಮ ಕಛೇರಿಯಿಂದ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಹೋಗಿರುತ್ತೇವೆ ಎಂದರೆ ಸರಿ. ನಾವು ಠಾಣೆಗೆ ಹೋದ ಬಗ್ಗೆ ಠಾಣಾಧಿಕಾರಿಗಳು ರಿಪೋರ್ಟ ಮಾಡಿಕೊಂಡಿರುವುದಿಲ್ಲ. ಠಾಣೆಗೆ ನೀವು ಹೋದಾಗ, Treebo 98 Street Hotel ನಮ್ಮ ಆರ್.ಆರ್.ನಗರದ ನಮ್ಮ ಕಛೇರಿಯ ವ್ಯಾಪ್ತಿಯಲ್ಲಿ ಇತ್ತು ಎಂದು ನಿಮಗೆ ಗೊತ್ತಿತ್ತು ಎಂದರೆ, ಸಾಕ್ಷಿ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ.

88. ನಿಮ್ಮ ಮೇಲಾಧಿಕಾರಿಗಳಿಗೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ಮತ್ತು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆ ಠಾಣಾಧಿಕಾರಿಗಳು, Treebo 98 Street Hotel ಗೆ ಹೋಗಬೇಕು ಎಂದು ತಿಳಿಸಿದ್ದರೇ, ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಮ್ಮ ಬಿಬಿಎಂಪಿ ಕಛೇರಿಯಲ್ಲಿ Treebo 98 Street Hotel ಗೆ ಸಂಬಂದಿಸಿದ ಎಲ್ಲಾ ದಾಖಲೆಗಳು ಲಭ್ಯವಿರುತ್ತದೆ ಎಂದರೆ, ಸಾಕ್ಷಿ ನಮ್ಮ ಬಿಬಿಎಂಪಿ ಕಛೇರಿ Joint Commissioner ಕಛೇರಿಯಾಗಿದ್ದು,

ಖಾತಾ ಮತ್ತು ಕಂದಾಯಕ್ಕೆ ಸಂಬಂದಿಸಿದ ದಾಖಲೆಗಳು ರೆವೆನ್ಯೂ ಕಛೇರಿಯಲ್ಲಿ ಮತ್ತು ಲೈಸೆನ್ಸಗೆ ಸಂಬಂಧಪಟ್ಟ ದಾಖಲೆಗಳು ಆರೋಗ್ಯ ಇಲಾಖೆಯಲ್ಲಿ ಇರುತ್ತವೆ ಎನ್ನುತ್ತಾರೆ.

89. ಮೊಬೈಲ್‌ನಲ್ಲಿ Treebo 98 Street Hotel ಲೊಕೇಷನ್‌ನ್ನು ಹುಡುಕಿದರೆ ಸಿಗುತ್ತದೆ ಎಂದರೆ, ಸಾಕ್ಷಿ ಸಿಗಬಹುದು ಎನ್ನುತ್ತಾರೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಹೋದಾಗ ಇನ್ಸಪೆಕ್ಟರ್ ನಾಗೇಶ್, ಗಿರೀಶ್ ನಾಯ್ಕ ಮತ್ತು ಸಂಜೀವ್ ಗೌಡ ಇದ್ದರಾ ಎಂದರೆ ಸಾಕ್ಷಿ ನಾವು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಗೆ ಹೋಗಿದ್ದು ಅಲ್ಲಿ ನಾಗೇಶ್ ಎಂಬ ಪೊಲೀಸ್ ನಿರೀಕ್ಷಕರು ಇದ್ದರು ಎನ್ನುತ್ತಾರೆ.

90. ನಾವು ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಇದ್ದ ಪೊಲೀಸ್ ನಿರೀಕ್ಷಕರಾದ ನಾಗೇಶ್ ರವರು ಮಹಜರ್ ಗೆ ಇಂತಿಂತ ಸ್ಥಳಕ್ಕೆ ಹೋಗುತ್ತಿರುವುದಾಗಿ, ನೀವು ಬರಬೇಕು ಎಂದು ತಿಳಿಸಿರಲಿಲ್ಲ. Treebo 98 Street Hotel ಆರ್.ಆರ್.ನಗರದ ಪ್ರಮುಖವಾದ ಸ್ಥಳದಲ್ಲಿ ಇದೆಯಾ ಎಂದರೆ, ಸಾಕ್ಷಿ ಮೇನ್ ರೋಡ್‌ನಲ್ಲಿ ಇದೆ ಎನ್ನುತ್ತಾರೆ. Treebo 98 Street Hotel, R.R.Nagar ಎಂದು ಯಾರಿಗಾದರು ವಿಳಾಸ ನೀಡಿದರೆ ಕಂಡುಹಿಡಿಯ ಬಹುದೇ ಎಂದರೆ, ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಕಛೇರಿಯ ವಿಳಾಸವನ್ನು ಯಾರಿಗಾದರು ಕೊಟ್ಟರೆ ಕಂಡು ಹಿಡಿಯಬಹುದೇ

ಎಂದರೆ, ಸಾಕ್ಷಿ ಕಂಡು ಹಿಡಿಯಬಹುದು ಎನ್ನುತ್ತಾರೆ.

91. ನನಗೆ Treebo 98 Street Hotel ನ ವಿಳಾಸ ನೀಡಿದರೆ, ಅದನ್ನು ನಾನು ಕಂಡುಹಿಡಿಯಬಹುದು. ಪೊಲೀಸ್ ನಿರೀಕ್ಷಕರಾದ ನಾಗೇಶ್ ರವರು ನನಗೆ ಸದರಿ Treebo 98 Street Hotel ನಿಮ್ಮ ಸರಹದ್ದಿನಲ್ಲಿ ಬಂದಿದ್ದು ಇದಕ್ಕೆ ನೀವು ಯಾವಾಗಲಾದರು ಹೋಗಿದ್ದೀರಾ ಎಂದು ನನ್ನನ್ನು ಕೇಳಿರುವುದಿಲ್ಲ. ನನ್ನನ್ನು ಸದರಿ ಹೋಟೆಲ್‌ಗೆ ಕರೆದುಕೊಂಡು ಹೋಗುವ ಮೊದಲು, ನಾಗೇಶ್ ಮತ್ತು ಅವರ ಸಿಬ್ಬಂದಿ ಮೊದಲೇ ಸದರಿ ಹೋಟೆಲ್ ಗೆ ಹೋಗಿ ಬಂದ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

92. ಯಾರಾದರು Treebo 98 Street Hotel ಎಂದು ಹುಡುಕಿದರೆ ಸಿಗುತ್ತದೆ ಹಾಗೂ ಪೊಲೀಸರಿಗೂ ಕೂಡ ಸಿಗುತ್ತದೆ ಎಂದರೆ ಸರಿ. ಪೊಲೀಸರು ನನ್ನನ್ನೇ ಕರೆದುಕೊಂಡು ಹೋಗಿ Treebo 98 Street Hotel ನ್ನು ಕಂಡುಹಿಡಿದು ಅದರಲ್ಲಿ ಶೋಧನೆ ಮಾಡಬಹುದಿತ್ತು ಎಂದರೆ ಸರಿಯಲ್ಲ.

**ಪ್ರಶ್ನೆ:** ಪೊಲೀಸ್ ಅಧಿಕಾರಿಗಳೇ ಹೋಗಿ ಸದರಿ ಹೋಟೆಲ್‌ನ್ನು ಶೋಧನೆ ಮಾಡಬಹುದಿತ್ತು. ನೀವೇನು ಹೇಳುವಿರಿ?

ಸದರಿ ಪ್ರಶ್ನೆಯನ್ನು ಸಂಬಂಧಪಟ್ಟ ತನಿಖಾಧಿಕಾರಿಗೆ ಕೇಳಬೇಕಾದ

ಪ್ರಶ್ನೆಯಾದ್ದರಿಂದ, ಸದರಿ ಪ್ರಶ್ನೆಯನ್ನು ತಿರಿಸ್ಕರಿಸಲಾಗಿತ್ತು.

93. ಆ ದಿನ ನಾನು ಪಿಎಸ್ ನಾಗೇಶ್‌ರವರ ವಾಹನದಲ್ಲಿ ಅವರ ಜೊತೆ Treebo 98 Street Hotel ಗೆ ಹೋಗಿದ್ದೆ. ಸಾಕ್ಷಿ ಮುಂದುವರೆದು ನನ್ನೊಂದಿಗೆ ನನ್ನ ಸಹೋದ್ಯೋಗಿ ವೇಣುಗೋಪಾಲ್(ಚಾ.ಸಾ.21), ಕಾರ್ತಿಕ್ ಮತ್ತು ಇತರೆ ಪೊಲೀಸ್ ಸಿಬ್ಬಂದಿ ಇದ್ದರು ಎಂದು ನುಡಿಯುತ್ತಾರೆ. ಸದರಿ ಹೋಟೆಲ್ ಗೆ ಹೋದ ತಕ್ಷಣವೇ ರಿಸ್ಪೆಷನ್‌ನಲ್ಲಿ ರಿಜಿಸ್ಟರ್ ನ್ನು ಪರಿಶೀಲನೆ ಮಾಡಿರುವುದಿಲ್ಲ.

94. ಸದರಿ ಹೋಟೆಲ್ ನ 2 ನೇ ಮಹಡಿಗೆ ಹೋದಾಗ ಬೀಗ ಹಾಕಿತ್ತಾ ಇಲ್ಲವಾ ಎಂದರೆ, ಸಾಕ್ಷಿ ಬೀಗ ಹಾಕಿತ್ತು ಎನ್ನುತ್ತಾರೆ. ಸದರಿ ಬೀಗವನ್ನು ತೆರೆದವರು ಯಾರು ಎಂದರೆ, ಸಾಕ್ಷಿ ರಿಸ್ಪೆಷನ್‌ನಲ್ಲಿ ಇದ್ದ ಮಾಲೀಕರು, ರೂಂಬಾಯ್‌ನ್ನು ಕರೆಸಿ ರೂಂ ಬೀಗ ತೆರೆಸಿದ್ದರು. ತನಿಖಾಧಿಕಾರಿಗಳು ನನ್ನನ್ನು ಮತ್ತು ವೇಣುಗೋಪಾಲ್‌ರವರನ್ನು ಸದರಿ ರೂಂ ಒಳಗೆ ಹೋಗಿ ಶೋಧ ಮಾಡಲು ತಿಳಿಸಿದ್ದರೇ ಎಂದರೆ, ಸಾಕ್ಷಿ ಒಟ್ಟಿಗೆ ಒಳಗಡೆ ಹೋಗಿದ್ದೆವು ಎನ್ನುತ್ತಾರೆ. ಆ ರೂಂನಲ್ಲಿ ಏನು ಸಿಕ್ಕಿರಲಿಲ್ಲ ಎಂದರೆ ಸರಿ. ಬೇರೆ ರೂಂಗಳಲ್ಲಿ ಬೇರೆ ಜನರು ವಾಸವಾಗಿದ್ದರೆ ಎಂದರೆ ಸಾಕ್ಷಿ ಅದನ್ನು ನಾವು ಚೆಕ್ ಮಾಡಿಲ್ಲ ಎನ್ನುತ್ತಾರೆ.

95. ಆನಂತರದಲ್ಲಿ ತನಿಖಾಧಿಕಾರಿಗಳು ರಿಜಿಸ್ಟರ್ ನ್ನು ತರಿಸಿ

ಪರಿಶೀಲನೆ ಮಾಡಿದ್ದರು. ರಿಸ್ಪೆಷನ್‌ನಲ್ಲಿ ಸದರಿ ಹೋಟೆಲ್‌ನ ಮಾಲೀಕರಾದ ರಾಮಕೃಷ್ಣ ಎಂಬುವವರು ಇದ್ದರು. ಸದರಿ ರಾಮಕೃಷ್ಣರವರು ನಮ್ಮ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ರಿಜಿಸ್ಟರ್ ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಸದರಿ ಹೋಟೆಲ್‌ನಲ್ಲಿ ವಾಸ ಇದ್ದ ಬೇರೆ ಗ್ರಾಹಕರನ್ನು ಪಂಚರಾಗಿ ಕರೆಸಿ ಸಹಿ ಪಡೆದುಕೊಂಡಿರುವುದಿಲ್ಲ.

96. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಅಲ್ಲಿ ನೋಡಿದ್ದನ್ನೆಲ್ಲಾ ನಾನೇನು ಬರೆದುಕೊಟ್ಟಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ಹೇಳಿದಂತೆ ಪೊಲೀಸರು ಟೈಪ್ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಹೋಟೆಲ್‌ನಲ್ಲಿ ರಿಜಿಸ್ಟರ್ ಬಿಟ್ಟು ಬೇರೆ ಏನು ಸಿಕ್ಕಿಲ್ಲ ಎಂದು ಹೇಳಿ ನೀವು ಬರೆಸಿದ್ದೀರಾ ಎಂದರೆ, ಸಾಕ್ಷಿ ಹೌದು ಎನ್ನುತ್ತಾರೆ.

**ಪ್ರಶ್ನೆಃ** ಪೊಲೀಸ್ ಅಧಿಕಾರಿಗಳು ತಾವಾಗೇ ಸದರಿ ಹೋಟೆಲ್ ಗೆ ಹೋಗಿ ರಿಜಿಸ್ಟರ್ನ್ನು ವಶಪಡಿಸಿಕೊಳ್ಳಬಹುದಿತ್ತು. ನೀವೇನು ಹೇಳುವಿರಿ?

ಸದರಿ ಪ್ರಶ್ನೆಯನ್ನು ಸಂಬಂಧಪಟ್ಟ ತನಿಖಾಧಿಕಾರಿಗೆ ಕೇಳಬೇಕಾದ ಪ್ರಶ್ನೆಯಾದ್ದರಿಂದ ಮತ್ತು ಸದರಿ ಪ್ರಶ್ನೆ ಈ ಸಾಕ್ಷಿಗೆ relevant ಆಗಿಲ್ಲದ ಕಾರಣ ಸದರಿ ಪ್ರಶ್ನೆಯನ್ನು ತಿರಸ್ಕರಿಸಲಾಗಿತ್ತು.

97. ನಾನು ಸದರಿ ರಿಜಿಸ್ಟರ್ ನ್ನು ನನ್ನ ಕೈಗೆ ತೆಗೆದುಕೊಂಡು

ಪರಿಶೀಲನೆ ಮಾಡಿರುವುದಿಲ್ಲ. ಸದರಿ ರಿಜಿಸ್ಟರ್ ಪ್ರಕಾರ ದಿಃ14.06.2024 ರಂದು ಎಷ್ಟು ಜನ ಗ್ರಾಹಕರು ಅಲ್ಲಿ ವಾಸವಾಗಿದ್ದರು ಎಂದು ನೀವು ನೋಡಿರುತ್ತೀರಾ ಎಂದರೆ, ಸಾಕ್ಷಿ ನೆನಪಿಗೆ ಬರುತ್ತಿಲ್ಲ ಎನ್ನುತ್ತಾರೆ. ಆ ರಿಜಿಸ್ಟರ್ ಪ್ರಕಾರ ಆ ದಿನ ಯಾರು ಯಾರು ಅಲ್ಲಿ ವಾಸವಾಗಿದ್ದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ ಎಂದರೆ ಸರಿ. ಸದರಿ ರಿಜಿಸ್ಟರ್ ನ(ನಿ.ಪಿ.118) ಯಾವುದೇ ಪುಟಕ್ಕೆ ನಾನು ಸಹಿ ಹಾಕಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರ ಜೆರಾಕ್ಸ ಪ್ರತಿಗೆ ಸಹಿ ಹಾಕಿದ್ದೇನೆ ಎನ್ನುತ್ತಾರೆ.

98. ದಿಃ08.06.2024 ಮತ್ತು 09.06.2024 ರಂದು ಯಾರು ಅಲ್ಲಿ ವಸತಿಯಾಗಿದ್ದರು ಎಂದು ನಿಮಗೆ ಹೇಳಲು ಆಗುತ್ತದೆಯೇ ಎಂದರೆ, ಸಾಕ್ಷಿ ನಿಖಿಲ್, ಕಾರ್ತಿಕ್ ಮತ್ತು ಕೇಶವರವರು ರೂಂ.ನಂ.203 ರಲ್ಲಿ ವಾಸವಾಗಿದ್ದು ಮತ್ತು ಈ ಕುರಿತು ಸರಿದ ರಿಜಿಸ್ಟರ್ ನಲ್ಲಿ ಈ ಕುರಿತು ನಮೂದು ಇದೆ ಎನ್ನುತ್ತಾರೆ. ದಿಃ08.06.2024 ಮತ್ತು 09.06.2024 ರಂದು ಸದರಿ ಹೋಟೆಲ್‌ನಲ್ಲಿ ಬೇರೆ ರೂಂಗಳಲ್ಲಿ ಬೇರೆ ಯಾರು ಯಾರು ಅಲ್ಲಿ ವಾಸವಾಗಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

99. ನಿ.ಪಿ.118-ರಿಜಿಸ್ಟರ್ ಪ್ರಕಾರ ಪ್ರತೀ ರೂಂನ್ನು allot ಮಾಡುವಾಗ ಒಬ್ಬರ ಹೆಸರನ್ನು ಮಾತ್ರ ಬರೆದಿರುತ್ತಾರೆ ಮತ್ತು ನಿ.ಪಿ.118(ಎ)ರಲ್ಲಿ ಮೂರು ಜನರ ಹೆಸರನ್ನು ಬರೆದಿದೆ ಎಂದರೆ, ಸಾಕ್ಷಿ ಸದರಿ

ರಿಜಿಸ್ಟರ್ ನ ಪೇಜ್ ನಂ.44 ನ್ನು ಪರಿಶೀಲನೆ ಮಾಡಿ ರೂಂ.ನಂ.205 ರಲ್ಲಿ ಇಬ್ಬರು ಹೆಸರು ಬರೆದಿದೆ ಮತ್ತು ರೂಂ.ನಂ.203 ರಲ್ಲಿ ಮೂರು ಜನರ ಹೆಸರು ಬರೆದಿದ್ದು ಮತ್ತು ಉಳಿದ ರೂಂ ನಂಬರ್ ಗಳಲ್ಲಿ ಒಬ್ಬಬ್ಬರ ಹೆಸರು ಬರೆದಿದೆ ಎನ್ನುತ್ತಾರೆ. ರೂಂ.ನಂ.205 ಇಬ್ಬರು allot ಆಗಿದ್ದು ಮತ್ತು ಇಬ್ಬರ ಬರವಣಿಗೆ ಇದೆ ಎಂದರೆ ಸಾಕ್ಷಿ ಬರವಣಿಗೆ ಬೇರೆ ಬೇರೆ ಇದೆ ಎನ್ನುತ್ತಾರೆ.

100. ನಿ.ಪಿ.118(ಎ)ರಲ್ಲಿ ರೂಂ.ನಂ.203 ರಲ್ಲಿ ಮೂವರ ಹೆಸರು ಒಬ್ಬರ ಬರವಣಿಗೆಯಲ್ಲಿ ಇದೆ ಎಂದರೆ ಸರಿ. ನಿ.ಪಿ.118(ಎ)ರಲ್ಲಿ ರೂಂ.ನಂ.203 ರಲ್ಲಿ ಮೂವರ ಹೆಸರನ್ನು ಪೊಲೀಸರ ಕೋರಿಕೆ ಮೆರೆಗೆ ಸೇರಿಸಿ ಸೃಷ್ಟಿಸಿರುತ್ತಾರೆ ಎಂದರೆ ಸಾಕ್ಷಿ ನಾವು ಹೋಗುವ ಮುನ್ನವೇ ಸದರಿ ಎಂಟ್ರಿ ಇತ್ತು ಎನ್ನುತ್ತಾರೆ. ನಿ.ಪಿ.118(ಎ)ರಲ್ಲಿ ಮೊಬೈಲ್ ನಂಬರ್ ಬೇರೆಯವರ ಬರವಣಿಗೆಯಲ್ಲಿ ಇದೆ ಎಂದರೆ ಸರಿ. ನಿ.ಪಿ.118 ಕ್ಕೂ ಮತ್ತು ನಿ.ಪಿ.118(ಎ)ಗೂ, ಈ ಪ್ರಕಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ದಿಃ09.06.2024 ರಂದು ನಿಖಿಲ್, ಕಾರ್ತಿಕ್ ಮತ್ತು ಕೇಶವರವರು ಸದರಿ ಹೋಟೆಲ್‌ನಲ್ಲಿ ಹೋಗಿ ವಾಸ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿಕೆ ಮೆರೆಗೆ ನಿ.ಪಿ.118(ಎ)ರಲ್ಲಿ ಬರವಣಿಗೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿ.ಪಿ.118 ರಿಜಿಸ್ಟರ್ ನಲ್ಲಿ ನನ್ನ ಗುರುತು ಹಾಕದೇ ಇದ್ದ ಕಾರಣ ಈ ರಿಜಿಸ್ಟರ್ ಆ ದಿನ ಪೊಲೀಸರು

ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ ಎಂದರೆ, ಸಾಕ್ಷಿ ಈ ರಿಜಿಸ್ಟರ್ ನ್ನು ಆ ದಿನ ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಸದರಿ ರಿಜಿಸ್ಟರ್ನ ಜೆರಾಕ್ಸ ಪ್ರತಿ ಮತ್ತು ಕಾರ್ತಿಕ್‌ನ ಆಧಾರ್ ಕಾರ್ಡ್‌ನ ಪ್ರತಿಯನ್ನು ಮಾತ್ರ ಪಡೆದುಕೊಳ್ಳಲಾಯಿತು ಎನ್ನುತ್ತಾರೆ. ಕಾರ್ತಿಕ್‌ನ ಆಧಾರ್ ಕಾರ್ಡ್‌ನ ನಂಬರ್ ನ್ನು, ಆ ಆಧಾರ್ ಕಾರ್ಡ್‌ನ್ನು ನೋಡಿಯೇ ಹೇಳಬೇಕು ಎಂದರೆ ಸರಿ. ಸದರಿ ಆಧಾರ್ ಕಾರ್ಡ ನಂಬರ್ ನ್ನು ಮಹಜರ್ ನಲ್ಲಿ ಬರೆದಿಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಸಮಯ 2.00 ಗಂಟೆಯಾಗಿದ್ದು, ಮಾನ್ಯ ಪದಾಂಕಿತ ಹಿರಿಯ 2 ನೇ ಆರೋಪಿಯ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಅವರ ಕೋರಿಕೆ ಮೇರೆಗೆ ಮುಂದುವರೆದ ಪಾಟಿಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

SC. 1319/2024
PW-19, CW-22

**xxxxxxxxxxxxxxxx**
**ದಿಃ11.08.2026 ರಂದು ಮಧ್ಯಾಹ್ನ 3.45 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಪಾಟಿಸವಾಲು 2 ನೇ ಆರೋಪಿ ಪರ ಪದಾಂಕಿತ ಹಿರಿಯ ಶ್ರೀ. ಹೆಚ್.ಪಿ ವಕೀಲರಿಂದಃ**

101. ನಿ.ಪಿ.118(ಎ)ರಲ್ಲಿ ರೂಂ.ನಂ.203 ರಲ್ಲಿ ಮೂವರ ಹೆಸರು

**(ಈ ಹಂತದಲ್ಲಿ ಸಮಯ 2.00 ಗಂಟೆಯಾಗಿದ್ದು, ಮಾನ್ಯ ಪದಾಂಕಿತ ಹಿರಿಯ 2 ನೇ ಆರೋಪಿಯ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಅವರ ಕೋರಿಕೆ ಮೆರೆಗೆ ಮುಂದುವರೆದ ಪಾಟಿಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ಪಾಟಿಸವಾಲು 1 ಮತ್ತು 12 ನೇ ಆರೋಪಿಗಳ ಪರ ಶ್ರೀ. ಬಾಲನ್ ವಕೀಲರಿಂದಃ</u>**

47. ನಿ.ಪಿ.89 ರಲ್ಲಿ ಕ್ರಮ ಸಂ.154 ಇದೆಯೇ ಎಂದರೆ, ಸಾಕ್ಷಿ ಇದೆ

98.

98.

98.

98.

**<u>ಪಾಟಿಸವಾಲು 3 ನೇ ಆರೋಪಿ ಪರ ಶ್ರೀ.ಡಿ.ಎಸ್.ಎಸ್ ವಕೀಲರ ಪರವಾಗಿ ಶ್ರೀ. ಕೆಪಿಪಿ ವಕೀಲರಿಂದಃ</u>**

3 ನೇ ಆರೋಪಿ ಪರ ವಕೀಲರು ಹಾಜರು ಇದ್ದು, ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿಯುತ್ತಾರೆ.

**<u>ಪಾಟಿಸವಾಲು 4,6 ರಿಂದ 10,13 ಮತು 15 ರಿಂದ 17 ನೇ ಆರೋಪಿಗಳ ಪರ ಶ್ರೀ. ಆರ್.ಆರ್.ವಕೀಲರಿಂದಃ</u>**

ಶ್ರೀ. ಆರ್.ಆರ್. ವಕೀಲರು ಹಾಜರು ಇದ್ದು, ಅವರು 1 ಮತ್ತು 2 ನೇ ಆರೋಪಿಗಳ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**<u>ಪಾಟಿಸವಾಲು 5 ನೇ ಆರೋಪಿ ಪರ ಶ್ರೀ. ಕೆ.ಆರ್.ಎಸ್ ವಕೀಲರ ಪರವಾಗಿ ಶ್ರೀ. ಕೆಎಂಎಸ್ ವಕೀಲರಿಂದಃ</u>**

5 ನೇ ಆರೋಪಿ ಪರ ಶ್ರೀ. ಕೆಪಿಪಿ ವಕೀಲರು ಹಾಜರು ಇದ್ದು, ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿಯುತ್ತಾರೆ.

**<u>ಪಾಟಿಸವಾಲು 11 ನೇ ಆರೋಪಿ ಪರ ಶ್ರೀ. ಎಂಜಿಎಸ್ ವಕೀಲರಿಂದಃ</u>**

ಶ್ರೀ. ಎಂ.ಜಿ.ಎಸ್. ವಕೀಲರು ಹಾಜರು ಇದ್ದು, ಅವರು 2 ನೇ ಆರೋಪಿಗಳ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**<u>ಪಾಟಿಸವಾಲು 14 ನೇ ಆರೋಪಿ ಪರ ಶ್ರೀ. ಎಡಿ ವಕೀಲರಿಂದಃ</u>**

14 ನೇ ಆರೋಪಿ ಪರ ವಕೀಲರು ಹಾಜರು ಇದ್ದು, ಅವರು 1 ಮತ್ತು 2 ನೇ ಆರೋಪಿಗಳ ಪರ ಮಾಡಿ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

SC. 1319/2024
PW-19, CW-22

**ಮರುವಿಚಾರಣೆಃ ಇಲ್ಲ.    ಸಮಯಃ 4.48p.m.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**